# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ–2015) ಅಧಿನಿಯಮ–1993

**ಶ್ರೀ ವಿಲ್ಫ್ರೆಡ್ ಡಿ'ಸೋಜ ***

**ಮುಖ್ಯಾಂಶಗಳು:**

ಅನೇಕ ಪರಿವರ್ತನೆಗಳನ್ನು ಕಾಣುತ್ತಾ ಬಂದ ಪಂಚಾಯಿತಿ ವ್ಯವಸ್ಥೆಯು ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಸಂವಿಧಾನಿಕ ಅಸ್ತಿತ್ವವನ್ನು ಪಡೆಯುತ್ತದೆ. ಕರ್ನಾಟಕ ರಾಜ್ಯವು 73ನೇ ತಿದ್ದುಪಡಿಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ ಎನ್ನುವ ಹೆಗ್ಗಳಿಕೆಯನ್ನು ಹೊಂದಿದೆ. ಸಂವಿಧಾನದ 73ನೇ ತಿದ್ದುಪಡಿಗೆ ಅನುಗುಣವಾಗಿ ಸಿದ್ಧಪಡಿಸಲಾದ ನೂತನ ಮಸೂದೆಯನ್ನು 1993ರ ಏಪ್ರಿಲ್ 1 ರಂದು ಶಾಸನ ಸಭೆಯಲ್ಲಿ ಮಂಡಿಸಲಾಯಿತು. ಸಾಕಷ್ಟು ಚರ್ಚೆಯ ನಂತರ ಎರಡೂ ಸದನಗಳು ಈ ಮಸೂದೆಗೆ ಅನುಮೋದನೆ ನೀಡಿದವು. ಏಪ್ರಿಲ್ 13ರಂದು ರಾಜ್ಯಪಾಲರ ಸಹಿಯನ್ನು ಪಡೆಯಲಾಯಿತು. ಕರ್ನಾಟಕ ಪಂಚಾಯಿತ್‌ರಾಜ್ ಅಧಿನಿಯಮ 1993 ಅದೇ ವರ್ಷದ ಮೇ 10 ರಿಂದ ಅನುಷ್ಠಾನಕ್ಕೆ ಬಂದಿತು.

ಈ ಮಸೂದೆ ಅನುಷ್ಠಾನಗೊಂಡ 22 ವರ್ಷಗಳ ನಂತರ ಇದೀಗ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ರೂಪವನ್ನು ಪಡೆದಿರುವ ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ–2015ಕ್ಕೆ ರಾಜ್ಯಪಾಲರು 16.12.2015 ರಂದು ಅನುಮೋದಿಸಿರುತ್ತಾರೆ. ಈ ಅಧಿನಿಯಮವು 31.12.2015ರಂದು ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದ್ದು ಶಾಸನವಾಗಿ 25.02.2016 ರಿಂದ ಕಾರ್ಯರೂಪಕ್ಕೆ ಬಂದಿದೆ. ಮೂಲ ಅಧಿನಿಯಮ (ಕೆಪಿಆರ್ ಅಧಿನಿಯಮ 1993)ಕ್ಕೆ ಸಮಗ್ರವಾದ ತಿದ್ದುಪಡಿಗಳನ್ನು ತರುವ ಮೂಲಕ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಇನ್ನಷ್ಟು ಭದ್ರಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಕಾಯಿದೆಯ ಮುಖ್ಯಾಂಶಗಳು ಈ ಕೆಳಗಿನಂತಿದೆ.

**ಅಧ್ಯಾಯ 1 ಎ: ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು**

ಭಾರತದ ಸಂವಿಧಾನದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳು ಎನ್ನುವ ಅಧ್ಯಾಯವಿದೆ. ಅದೇ ಮಾದರಿಯಲ್ಲಿ ಪಂಚಾಯಿತ್ ರಾಜ್ ಸಂಸ್ಥೆಗಳಿಗೆ ಕೂಡಾ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿದೆ. ಈ ನೀತಿ ನಿರ್ದೇಶಕ ತತ್ವಗಳು ಪಂಚಾಯಿತ್‌ರಾಜ್ ಸಂಸ್ಥೆಗಳ ನಿರ್ವಹಣೆ ಸಂಬಂಧಿಸಿದ ದಿಕ್ಸೂಚಿಗಳಾಗಿದೆ ಮೂಲ ಕಾಯಿದೆಯ ಪ್ರಕರಣ 3ಕ್ಕೆ ತಿದ್ದುಪಡಿ ತಂದು "ಗ್ರಾಮ ಸ್ವರಾಜ್ ಘಟಕ" ಗಳನ್ನು ಸ್ಪಷ್ಟಪಡಿಸಲಾಗಿದೆ. ಈ ಕುರಿತು ಪ್ರತ್ಯೇಕವಾದ ಲೇಖನವನ್ನು ಕೈಪಿಡಿಯಲ್ಲಿ ನೀಡಲಾಗಿದೆ.

**ಪ್ರಕರಣ 3 :** ಗ್ರಾಮ ಸ್ವರಾಜ್ ಘಟಕಗಳು: ನೂತನ ಅಧಿನಿಯಮದ ಪ್ರಕಾರ ಜನವಸತಿ ಸಭೆ, ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳು ಗ್ರಾಮಸ್ವರಾಜ್ ಘಟಕಗಳಾಗಿರುತ್ತವೆ.

- **ಪ್ರಕರಣ 3ಎ :** ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು
- **ಪ್ರಕರಣ 3 ಬಿ :** ಜನವಸತಿ ಸಭಾದ ಸಭೆಗಳ ನಿರ್ವಹಣೆಯ ನಿಯಮಗಳು

**ಪ್ರಕರಣ 3 ಸಿ :** ವಾರ್ಡ್ ಸಭೆಯ ರಚನೆ

ಈ ಪ್ರಕರಣದಲ್ಲಿ ಗ್ರಾಮ ಸಭೆಯ ರಚನೆ ಮತ್ತು ಪ್ರಕಾರ್ಯಗಳನ್ನು ವಿವರಿಸಲಾಗಿದೆ.

---

* ಅಧ್ಯಕ್ಷರು, ಜನವಿಕಾಸ ಕರ್ನಾಟಕ ಸಂಘ (ರಿ), ತರಬೇತಿ ಸಲಹೆಗಾರರು, ಕರ್ನಾಟಕ ಪಂಚಾಯತ್ ಪರಿಷತ್

ANSSIRD & PR

- **ಪ್ರಕರಣ 3 ಎಫ್ :** ಗ್ರಾಮ ಸಭೆಯ ಕರ್ತವ್ಯಗಳ ಕುರಿತು ವಿವರಣೆ

- **ಪ್ರಕರಣ 3 ಜಿ :** ಈ ಪ್ರಕರಣವು ಗ್ರಾಮಸಭಾ ಸಭೆಗಳನ್ನು ನಡೆಸುವ ಕುರಿತು ಸಮಗ್ರವಾದ ನಿಯಮಗಳನ್ನು ಒಳಗೊಂಡಿದೆ.

- **ಪ್ರಕರಣ 3 ಹೆಚ್ :** ಗ್ರಾಮ ಸಭಾದ ವಿಶೇಷ ಸಭೆಗಳು: ಈ ಪ್ರಕರಣದಲ್ಲಿ ಗ್ರಾಮ ಸಭಾದ ವಿಶೇಷ ಸಭೆಗಳನ್ನು ಯಾವ ಸಂದರ್ಭಗಳಲ್ಲಿ ಕರೆಯಬಹುದು ಎಂದು ತಿಳಿಸಿದೆ.

- ಮೂಲ ಅಧಿನಿಯಮದ 12ನೇ ಪ್ರಕರಣಕ್ಕೆ ಮಾಡಿರುವ ತಿದ್ದುಪಡಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಮೇಲಿನ ಅಧಿಕಾರ ದುರುಪಯೋಗದ ಆರೋಪಗಳು ಸಾಬೀತಾದರೆ ಅವರು ಮುಂದಿನ ಆರು ವರ್ಷಗಳ ಅವಧಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ ಎಂದು ಸ್ಪಷ್ಟಪಡಿಸಲಾಗಿದೆ. ಈ ಹಿಂದೆ ಅದು ಐದು ವರ್ಷಗಳ ಅವಧಿಗೆ ಎಂದು ಇತ್ತು.

- **ಪ್ರಕರಣ 24ಎ :** ಬಾಕಿ ಪ್ರಕರಣಗಳ ವರ್ಗಾವಣೆ: ಈ ಪ್ರಕರಣದಲ್ಲಿ 2015 ರ ನೂತನ ಕಾಯಿದೆಗಿಂತ ಮೊದಲನೆ ಚುನಾವಣಾ ವಿವಾದಗಳಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು "ಗೊತ್ತು ಪಡಿಸಿದ ನ್ಯಾಯಲಯ"ಕ್ಕೆ ವರ್ಗಾಯಿಸಿ ವಿಲೇ ಮಾಡಬೇಕು ಎಂದು ತಿಳಿಸಿದೆ.

- **ಪ್ರಕರಣ 43ಎ :** ಈ ಪ್ರಕರಣವು ಸದಸ್ಯರ ಸದಸ್ಯತ್ವದ ರದ್ದತಿ ಕುರಿತಾದ ಪ್ರಕ್ರಿಯೆಯನ್ನು ವಿವರಿಸುತ್ತದೆ.

- ಸದಸ್ಯನು/ಳು ತನ್ನ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ದುರ್ನಡತೆ ತೋರಿಸಿದ್ದು ಸಾಬೀತಾದರೆ

- ಹುದ್ದೆಯನ್ನು ನಿರ್ವಹಿಸಲು ವೈದ್ಯಕೀಯವಾಗಿ ಅಸಮರ್ಥನಾಗಿದ್ದರೆ

- ಅಸ್ವಸ್ಥ ಚಿತ್ತ ಅಥವಾ ದಿವಾಳಿ ಹೊಂದಿದರೆ

- ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ಹೊಂದಿದ್ದ ಸಂದರ್ಭಗಳಲ್ಲಿ

- ಗ್ರಾಮ ಪಂಚಾಯಿತಿಯ 4 ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರು ಹಾಜರಾದರೆ

- ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸಭೆಯನ್ನು ಕರೆಯಬೇಕಾಗಿದ್ದ ಸಂದರ್ಭಗಳಲ್ಲಿ ಸತತವಾಗಿ ಎರಡು ಬಾರಿ ವಿಫಲರಾದರೆ

- ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷ/ಉಪಾಧ್ಯಕ್ಷ ಹುದ್ದೆಗೆ ಚುನಾವಣೆ ನಡೆಯುವ ಸಂದರ್ಭದಲ್ಲಿ ಯಾವುದೇ ಮತದಾರ ಅಥವಾ ಸದಸ್ಯರನ್ನು ಸೆಳೆಯುವಲ್ಲಿ ದಬ್ಬಾಳಿಕೆ ಅಥವಾ ವಂಚನೆ ಮಾಡಿರುವುದು ಸಾಬೀತಾದರೆ

- ಪಂಚಾಯತಿನ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ವ್ಯವಹಾರಿಕವಾಗಿ/ಪಾಲುದಾರನಂತೆ ಕಂಡು ಬಂದರೆ ಅಥವಾ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ವ್ಯಕ್ತಿಯೊಂದಿಗೆ ತೊಡಗಿರುವುದು ಕಂಡು ಬಂದರೆ

- ಈ ಮೇಲಿನ ಸಂದರ್ಭಗಳಲ್ಲಿ "ಸದಸ್ಯತ್ವ ರದ್ದತಿ" ಅನ್ವಯವಾಗುತ್ತದೆ. ಆದರೆ ಸದಸ್ಯತ್ವ ರದ್ದತಿಗಿಂತ ಮುಂಚಿತವಾಗಿ ಸೂಕ್ತವಾದ ವಿಚಾರಣೆ ನಡೆಸುವುದಲ್ಲದೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಬೇಕು.

ANSSIRD&PR

- ಸದಸ್ಯತ್ವ ರದ್ದತಿ ಮಾಡಲಾದ ಸದಸ್ಯ/ಅಧ್ಯಕ್ಷ/ಉಪಾಧ್ಯಕ್ಷರು ಮುಂದಿನ ಆರು ವರ್ಷಗಳ ಅವಧಿಗೆ ಚುನಾವಣೆಗೆ ಸ್ಪರ್ಧಿಸುವಂತಿಲ್ಲ
- **ಪ್ರಕರಣ 43ಬಿ :** ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ : ಗ್ರಾಮ ಪಂಚಾಯಿತಿಗೆ ಚುನಾಯಿತರಾದ ಪ್ರತಿಯೊಬ್ಬ ಸದಸ್ಯರು ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರ ಚರ ಮತ್ತು ಸ್ಥಿರ ಆಸ್ತಿಗಳು ಹಾಗೂ ಹೊಣೆಗಾರಿಕೆಗಳ ಕುರಿತು ಚುನಾವಣಾ ಆಯೋಗ ಮುಂದೆ ಘೋಷಿಸುವುದನ್ನು ಕಡ್ಡಾಯಗೊಳಿಸಿದೆ.
- ಸದಸ್ಯತ್ವದ ಅವಧಿ ಪ್ರಾರಂಭಗೊಂಡ ಮೂರು ತಿಂಗಳ ಒಳಗೆ ನಿಗದಿತ ನಮೂನೆಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರವನ್ನು ಘೋಷಿಸಲೇಬೇಕು
- ಸದಸ್ಯತ್ವದ ಅವಧಿ ಮುಗಿಯುವವರೆಗೂ ಪ್ರತಿ ವರ್ಷ ಕ್ಯಾಲೆಂಡರ್ ವರ್ಷ ಮುಗಿದ ಒಂದು ತಿಂಗಳ ಒಳಗೆ ಘೋಷಣೆ ಮಾಡಬೇಕು
- ಘೋಷಣೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಮೂಲಕ ದಾಖಲಿಸಬೇಕು
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಎಲ್ಲ ಸದಸ್ಯರು ದಾಖಲಿಸಿದ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಗಳನ್ನು ಪ್ರತಿ ವರ್ಷ ಮೇ ಮೊದಲ ವಾರದಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಜುಲೈ ತಿಂಗಳೊಳಗೆ ವಿವರಗಳನ್ನು ದಾಖಲಿಸದ ಸದಸ್ಯರ ಪಟ್ಟಿಯನ್ನು ಕೂಡಾ ಚುನಾವಣಾ ಆಯೋಗಕ್ಕೆ ಕಳುಹಿಸಬೇಕು
- ಸದಸ್ಯರು ಆಸ್ತಿ ವಿವರಗಳನ್ನು ಘೋಷಿಸಿದ ತರುವಾಯ ಹೊಸದಾಗಿ ಆಸ್ತಿಯನ್ನು ಅರ್ಜಿಸಿದರೆ ಅಥವಾ ವಿಲೇ ಮಾಡಿದರೆ ಈ ವಿವರಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಮೂಲಕ ಚುನಾವಣಾ ಆಯೋಗಕ್ಕೆ ನೀಡಬೇಕು
- ಮೇಲೆ ತಿಳಿಸಿದ ಕ್ರಮಗಳಿಗೆ ತಪ್ಪಿದರೆ ಅಥವಾ ತಪ್ಪು ಮಾಹಿತಿ ದಾಖಲಿಸಿದರೆ ಅಂತಹ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಅವರನ್ನು ಸದಸ್ಯತ್ವದಿಂದ ತೆಗೆದು ಹಾಕಿ ಅವರ ಸ್ಥಾನವನ್ನು ಖಾಲಿ ಎಂದು ಘೋಷಿಸಬೇಕು
- **ಪ್ರಕರಣ 44ರ ತಿದ್ದುಪಡಿ :** ಗ್ರಾಮ ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದಂತೆ ಅನುಸೂಚಿತ ಜಾತಿಗೆ ಮೀಸಲಾದ ಸ್ಥಾನಗಳಿಗೆ ಆ ಸಮುದಾಯದ ವ್ಯಕ್ತಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಅನುಸೂಚಿತ ಪಂಗಡದ ವ್ಯಕ್ತಿಯನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿ ಲಭ್ಯವಿಲ್ಲದ ಸಂದರ್ಭದಲ್ಲಿ ಅನುಸೂಚಿತ ಜಾತಿಯ ವ್ಯಕ್ತಿಯನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ.
- **ಪ್ರಕರಣ 48ರ ತಿದ್ದುಪಡಿ ರಾಜೀನಾಮೆ ಅಂಗೀಕಾರ:** ಈ ಪ್ರಕರಣದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ/ಉಪಾಧ್ಯಕ್ಷರ ರಾಜೀನಾಮೆ ಅಂಗೀಕಾರ ಮಾಡುವ ಕುರಿತು ವಿವರಗಳಿವೆ.
- ರಾಜೀನಾಮೆ ಪತ್ರವನ್ನು ಸಹಾಯಕ ಕಮೀಷನರ್‌ಗೆ ಸಲ್ಲಿಸಬೇಕು.
- ಸಹಾಯಕ ಕಮೀಷನರ್ ಅವರು ರಾಜೀನಾಮೆಗೆ ಸಂಬಂಧಿಸಿದ ಕಾರಣವನ್ನು ವಿಚಾರಣೆ ಮಾಡಬೇಕು.
- ಈ ಕುರಿತು ದೂರುಗಳಿದ್ದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ವಿಚಾರಣೆ ಮಾಡಿ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬೇಕು.

ANSSIRD & PR

- ಬೆದರಿಕೆ, ಒತ್ತಾಯ, ಅನುಚಿತ ಪ್ರಭಾವ ಮತ್ತು ಪ್ರಲೋಭನೆಯಿಂದ ರಾಜೀನಾಮೆ ನೀಡಿರುವುದು ಕಂಡು ಬಂದಲ್ಲಿ ಅಂತಹ ರಾಜೀನಾಮೆ ಪತ್ರವನ್ನು ಸ್ವೀಕರಿಸಲಾರದು.

- **49ನೇ ಪ್ರಕರಣದ ತಿದ್ದುಪಡಿ ಅವಿಶ್ವಾಸ ಮಂಡನೆ:** ಈ ತಿದ್ದುಪಡಿಯ ಪ್ರಕಾರ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಅಧಿಕಾರ ಸ್ವೀಕರಿಸಿದ 30 ತಿಂಗಳುಗಳೊಳಗೆ ಮಂಡಿಸುವಂತಿಲ್ಲ.

ಅಲ್ಲದೆ ಅಧಿಕಾರ ದುರುಪಯೋಗ, ಪಂಚಾಯಿತಿ ನಿಧಿ ಮತ್ತು ಆಸ್ತಿಗಳ ದುರುಪಯೋಗ, ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆಸಿರುವ ಕುರಿತು ನಿರ್ಧಿಷ್ಟ ಆಪಾದನೆ ಇಲ್ಲದೆ ಅಧ್ಯಕ್ಷ/ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿಲ್ಲ.

- **ಪ್ರಕರಣ 53ರ ತಿದ್ದುಪಡಿ–ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆ:**

- ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆಯ ಉದ್ದೇಶಕ್ಕಾಗಿ ಕರೆದ ಸಭೆಯಲ್ಲಿ ಕೋರಂ ಅಭಾವ ಉಂಟಾದಾಗ ಅಧ್ಯಕ್ಷತೆ ವಹಿಸಿದವರು ಸಭೆಯನ್ನು 30 ನಿಮಿಷಗಳ ಅವಧಿಗೆ ಮುಂದೂಡಬೇಕು.

- ಆ ಅವಧಿಯಲ್ಲೂ ಕೋರಂ ಆಗದಿದ್ದರೆ ರಜೆ ದಿನ ಅಲ್ಲದ ಕೆಲಸದ ದಿನಕ್ಕೆ ಸಭೆಯನ್ನು ಮುಂದೂಡಬೇಕು.

- ಮುಂದೂಡಿದ ದಿನಾಂಕದಂದು ನಡೆಯುವ ಸಭೆಯಲ್ಲಿ ಕೋರಂ ಅಭಾವ ಇದ್ದರೂ ಚುನಾವಣೆಯನ್ನು ನಡೆಸಬೇಕು.

- **ಪ್ರಕರಣ 57ರ ತಿದ್ದುಪಡಿ:** ಯಾವುದಾದರೂ ಗ್ರಾಮ ಪಂಚಾಯಿತಿ ಅಂಗೀಕರಿಸಿದ ನಿರ್ಣಯವು ಕಾಯಿದೆಯ ನಿಯಮ, ನಿಭಂಧನೆಗಳನ್ನು ಉಲ್ಲಂಘಿಸಿದೆಯೆಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತೀರ್ಮಾನಿಸಿದರೆ, ಈ ಕುರಿತಂತೆ ಕಾಯಿದೆಯ 237ನೇ ಪ್ರಕರಣದ ಅಡಿಯಲ್ಲಿ ಕ್ರಮ ವಹಿಸಲು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕು.

- **ಪ್ರಕರಣ 58ರ ತಿದ್ದುಪಡಿ:** ಮೂಲ ಕಾಯಿದೆಯಲ್ಲಿ ಗ್ರಾಮ ಪಂಚಾಯಿತಿಗೆ ನಿಗದಿಪಡಿಸಿರುವ ಪ್ರಕಾರ್ಯಗಳ ಜೊತೆಗೆ ಹೊಸದಾಗಿ ತಿದ್ದುಪಡಿಯ ಮೂಲಕ ಅಧಿಕಾರಗಳನ್ನು ನೀಡಲಾಗಿದೆ.

- ಗ್ರಾಮ ಪಂಚಾಯಿತಿಯು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕು.

- ಈ ರೀತಿ ಕಾರ್ಯನಿರ್ವಹಿಸಲು ಅಗತ್ಯವಿರುವ ಅಧಿಕಾರ, ಪ್ರಕಾರ್ಯಗಳು, ಸಿಬ್ಬಂದಿ ವ್ಯವಸ್ಥೆ ಮತ್ತು ನಿಧಿಯನ್ನು ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿಗಳಿಗೆ ಪ್ರಧಾನ ಮಾಡಬೇಕು.

- ಅಧಿನಿಯಮದ ಅನುಸೂಚಿ–1 ಮತ್ತು ಜವಾಬ್ದಾರಿ ನಕ್ಷೆಯಲ್ಲಿ ತಿಳಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಗ್ರಾಮ ಪಂಚಾಯಿತಿಗಳ ಹೊಣೆಗಾರಿಕೆಯಾಗಿದೆ.

- ಈ ಕುರಿತಾಗಿ ಒಟ್ಟು 26 ಜವಾಬ್ದಾರಿಗಳನ್ನು ನೂತನ ಕಾಯಿದೆಯಲ್ಲಿ ಸ್ಪಷ್ಟಪಡಿಸಲಾಗಿದೆ.

- **ಹೊಸ ಪ್ರಕರಣಗಳ ಸೇರ್ಪಡೆ:** 2015ರ ನೂತನ ಕಾಯಿದೆಗೆ 58ಬಿ, 58ಸಿ, 58ಡಿ, 58ಇ ಮತ್ತು 58ಎಫ್ ಪ್ರಕರಣಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. ಸೇರ್ಪಡೆಗಳ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಕೆಲವು ವಿಶೇಷವಾದ ಸಾಮಾಜಿಕ ಜವಾಬ್ದಾರಿಗಳನ್ನು ವಹಿಸಲಾಗಿದೆ.

ANSSIRD & PR

- **ಪ್ರಕರಣ 58 ಬಿ :** ಈ ಪ್ರಕರಣವು ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸುವ ಕರ್ತವ್ಯವನ್ನು ಗ್ರಾಮ ಪಂಚಾಯಿತಿಗೆ ವಹಿಸಿದೆ.
- ವಿಶೇಷವಾಗಿ ಮಹಿಳೆಯರು, ಅನುಸೂಚಿತ ಜಾತಿ ಮತ್ತು ವರ್ಗಗಳು ಹಾಗೂ ಸಾಮಾನ್ಯ ವ್ಯಕ್ತಿಗಳ ಹಕ್ಕುಗಳು, ಘನತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವುದೋ ರೀತಿಯ ಆಚರಣೆಗಳು.
- ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಬಹಿಷ್ಕಾರ ಹಾಕುವುದು ಮುಂತಾದ ಅನಿಷ್ಠಗಳ ಕುರಿತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡುವುದು
- **ಪ್ರಕರಣ 58 ಸಿ :** ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ಹಾಗೂ ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯಿತಿಗಳ ಕರ್ತವ್ಯವಾಗಿದೆ.
- **ಪ್ರಕರಣ 58 ಡಿ :** ಕಂದಾಯ ಭೂಮಿಯನ್ನು ಹೊರತು ಪಡಿಸಿದಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮತ್ತು ಯಾವುದೇ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಸ್ವತ್ತನ್ನು ಒತ್ತುವರಿ ಮಾಡಿದ ಸಂದರ್ಭದಲ್ಲಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲು ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಅಗತ್ಯ ಕ್ರಮ ಕೈಗೊಳ್ಳುವುದು.
- **ಪ್ರಕರಣ 58 ಇ:** ಪರಿಸರ ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ನಿರ್ವಹಿಸಬೇಕಾದ ಕರ್ತವ್ಯಗಳು
- **ಪ್ರಕರಣ 58 ಎಫ್ :** ಅಪಾಯಕಾರಿಯಾಗಿರುವ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳು, ತೆರೆದ ಬಾವಿಗಳು ಮತ್ತು ಹೊಂಡಗಳನ್ನು ತೋಡುವುದನ್ನು ತಡೆಗಟ್ಟಲು ಸಂಬಂಧಪಟ್ಟ ಸರ್ಕಾರದ ಇಲಾಖೆಗಳ ಜೊತೆಗೂಡಿ ಕ್ರಮವಹಿಸುವುದು.
- **ಪ್ರಕರಣ 60 ಎ ಮತ್ತು 60 ಬಿ :**
- ಕಾಮಗಾರಿಗಳ ನಿರ್ವಹಣೆ ಮತ್ತು ಸರಕುಗಳ ಸೇವೆಗಳನ್ನು ಒದಗಿಸುವ ಸಂದರ್ಭದಲ್ಲಿ ಕೆಟಿಪಿಪಿ ಅಧಿನಿಯಮ–1999ರ ಉಪಬಂಧಗಳನ್ನು ಕಡ್ಡಾಯವಾಗಿ ಪಾಲಿಸುವುದು.
- ಗ್ರಾಮ ಪಂಚಾಯಿತಿಗಳ ಅಧಿಕಾರ ವ್ಯಾಪ್ತಿಯಲ್ಲಿ ನಡೆಯುವ ರೂ. 20 ಲಕ್ಷಗಳ ಮೊತ್ತವರೆಗಿನ ಕಾಮಗಾರಿಗಳಲ್ಲಿ ಫಲಾನುಭವಿಗಳ ದೇಣಿಗೆ ಶೇ.10 ಕ್ಕೆ ಕಡಿಮೆಯಾಗಷ್ಟು ಇದ್ದ ಸಂದರ್ಭದಲ್ಲಿ ಫಲಾನುಭವಿಗಳ ಅಥವಾ ಸ್ವ–ಸಹಾಯ ಗುಂಪುಗಳ ಸಮೂಹಕ್ಕೆ ಸಮುದಾಯ ಗುತ್ತಿಗೆ ನೀಡುವ ಅವಕಾಶವನ್ನು ಪ್ರಕರಣ 60 ಬಿ ಮೂಲಕ ನೀಡಲಾಗಿದೆ.
- **ಪ್ರಕರಣ 61– ಸ್ಥಾಯಿ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳು:** ತಿದ್ದುಪಡಿಯ ಮೂಲಕ ಸ್ಪಷ್ಟಪಡಿಸಲಾಗಿರುವ ಗ್ರಾಮ ಪಂಚಾಯಿತಿಯ 3 ಸ್ಥಾಯಿ ಸಮಿತಿಗಳ ಈ ಕೆಳಗಿನಂತಿವೆ
- ಸಾಮಾನ್ಯ ಸ್ಥಾಯಿ ಸಮಿತಿ
- ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
- ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
- ಸಾಮಾನ್ಯ ಸ್ಥಾಯಿ ಸಮಿತಿಗೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

ANSSIRD & PR

- ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರೇ ಅಧ್ಯಕ್ಷರು
- ಅನುಸೂಚಿತ ಜಾತಿ/ಪಂಗಡದ ಸದಸ್ಯರ ಪೈಕಿ ಒಬ್ಬರನ್ನು ಸಾಮಾಜಿಕ ನ್ಯಾಯ ಸ್ಥಾಯಿಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಮಾಡಬೇಕು.
- ಈ ಮೂರು ಸ್ಥಾಯಿ ಸಮಿತಿಗಳು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಈ ಪ್ರಕರಣದಲ್ಲಿ ವಿವರವಾಗಿ ನೀಡಿದೆ.
- **ಪ್ರಕರಣ 64ರ ತಿದ್ದುಪಡಿ:** ಈ ತಿದ್ದುಪಡಿಯಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಕಟ್ಟಡ ಮತ್ತು ಇತರ ಪರವಾನಿಗೆಗಳನ್ನು ನೀಡುವ ಸಂದರ್ಭದಲ್ಲಿ "ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961"ರ ಉಪಬಂಧಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.
- ವಿಶೇಷವಾಗಿ ಮೊಬೈಲ್ ಟವರ್‌ಗಳ ಸ್ಥಾಪನೆಗೂ ಗ್ರಾಮ ಪಂಚಾಯಿತಿಗಳ ಪರವಾನಿಗೆ ಕಡ್ಡಾಯಗೊಳಿಸಿದೆ. ಆ ಮೂಲಕ ಅವುಗಳನ್ನು ತೆರಿಗೆಯ ವ್ಯಾಪ್ತಿಗೆ ತರಲಾಗಿದೆ.
- **ಪ್ರಕರಣ 70 ರ ತಿದ್ದುಪಡಿ:** ವಿವಿಧ ಪರವಾನಿಗೆಗಳನ್ನು ನೀಡುವ ಕುರಿತಂತೆ ಅನುಸರಿಸಲೇಬೇಕಾದ ಪ್ರಕ್ರಿಯೆ ಮತ್ತು ಹೊಣೆಗಾರಿಕೆಗಳನ್ನು ಈ ಪ್ರಕಣದಲ್ಲಿ ಮಾಡಲಾಗಿದೆ.
- **ಅಧ್ಯಾಯ iV ಎ ಸೇರ್ಪಡೆ :** 110 (ಎ) ಇದು ಬಹಳ ಪ್ರಮುಖವಾದ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ಸ್ಪಷ್ಟಪಡಿಸಲಾಗಿದೆ ಪ್ರಸ್ತುತ ಕಾಯಿದೆ ಪ್ರಕಾರ ಗ್ರಾಮ ಪಂಚಾಯಿತಿ ಸದಸ್ಯರು ಈ ಕೆಳಗೆ ತಿಳಿಸಿರುವ 11 ಅಂಶಗಳನ್ನು ಪಾಲಿಸಬೇಕಿದೆ.

1. ಪಂಚಾಯಿತಿ ವ್ಯಾಪ್ತಿಯ ಪ್ರತಿಯೊಂದು ವರ್ಗಗಳು ಹಾಗೂ ತಾವು ಪ್ರತಿನಿಧಿಸುವ ಮತದಾನ ಕ್ಷೇತ್ರಗಳ ಹಿತಾಸಕ್ತಿಯನ್ನು ನಿಷ್ಪಕ್ಷಪಾತವಾಗಿ ಪ್ರತಿನಿಧಿಸುವುದು.
2. ಪಂಚಾಯಿತಿಯ ನಿವಾಸಿಗಳು ಮಾಡುವ ಮನವಿ ಮತ್ತು ವಿಚಾರಣೆಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಸ್ಪಂದಿಸುವುದು.
3. ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸಿ ಮುಂದಾಳಾತ್ವ ವಹಿಸುವುದು.
4. ಸಾರ್ವಜನಿಕ ಜೀವನದಲ್ಲಿ ನಡತೆ ಮತ್ತು ನೈತಿಕತೆಯನ್ನು ಪಾಲಿಸುವುದು.
5. ವ್ಯಕ್ತಿಯ ಅನುಕೂಲ ಅಥವಾ ಅನಾನುಕೂಲವನ್ನು ಪ್ರಧಾನ ಮಾಡುವಲ್ಲಿ ಬೇಧಭಾವ ತೋರಿಸದೆ ಸಾರ್ವಜನಿಕ ಹಿತಾಸಕ್ತಿಯಿಂದ ಕಾರ್ಯನಿರ್ವಹಿಸುವುದು.
6. ಯಾವುದೇ ವ್ಯಕ್ತಿಯ ವಿರುದ್ಧ ಬೇಧ–ಭಾವ ತೋರಿಸದೆ ಇರುವುದು. ಸಮಾನತೆಯನ್ನು ಪ್ರೋತ್ಸಾಹಿಸುವುದು. ಮತ, ಧರ್ಮ, ಲಿಂಗ, ವಯಸ್ಸು ಅಥವಾ ಅಸಮರ್ಥತೆಯನ್ನು ಪರಿಗಣಿಸದೆ ಅವರನ್ನು ಗೌರದಿಂದ ಕಾಣುವುದು.
7. ಜನರಿಗೆ ಅಗತ್ಯವಿರುವ ಮಾಹಿತಿಯನ್ನು ಪಡೆಯಲು ಅವಕಾಶ ಕಲ್ಪಿಸುವುದು.
8. ಹಣಕಾಸಿನ ಹಿತಾಸಕ್ತಿ ಇರುವ ಯಾವುದೇ ಚರ್ಚೆ ಅಥವಾ ಮತದಾನದಲ್ಲಿ ಭಾಗವಹಿಸದೆ ಸ್ವ–ನಿಯಂತ್ರಿಸಿಕೊಳ್ಳುವುದು.

ANSSIRD & PR

9. ಆದ್ಯತೆಗಳು ಮತ್ತು ಗುರಿಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಕಾರ್ಯನಿರ್ವಹಣೆ ಇದೆಯೇ ಎಂದು ಪರಿಶೀಲಿಸುವುದು.

10. ಸರಕಾರವು ನಿಗಧಿಪಡಿಸಿದ ಆದ್ಯತೆಗಳನ್ನು ಸ್ಥಳೀಯ ಸಂದರ್ಭಗಳಲ್ಲಿ ಅತ್ಯುತ್ತಮವಾಗಿ ನಿರ್ವಹಿಸುವುದು.

11. ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸ್ಥಳೀಯ ನಿವಾಸಿಗಳ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡುವುದು.

- **ಇತರೆ ತಿದ್ದುಪಡಿಗಳು:** ಈ ಮೇಲಿನ ಅಂಶಗಳಲ್ಲದೆ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಈ ಕೆಳಗಿನ ಕೆಲವು ತಿದ್ದುಪಡಿಗಳು ಪ್ರಮುಖವಾಗಿವೆ.
- **ಪ್ರಕರಣ 136 ಎ :** ಸದಸ್ಯರ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆ
- **ಪ್ರಕರಣ 136 ಬಿ :** ಸದಸ್ಯತ್ವವು ನಿಂತು ಹೋಗುವುದು

ಈ ಎಲ್ಲಾ ತಿದ್ದುಪಡಿಗಳು ಮತ್ತು ಸೇರ್ಪಡೆಗಳ ಗ್ರಾಮ ಪಂಚಾಯಿತಿಗಳ ಸಬಲೀಕರಣದ ದೃಷ್ಟಿಯಿಂದ ಅತ್ಯಂತ ಮಹತ್ವವನ್ನು ಹೊಂದಿದೆ.

**ತಾಲ್ಲೂಕು ಪಂಚಾಯಿತಿಗೆ ಸಂಬಂಧಿಸಿದ ತಿದ್ದುಪಡಿಗಳ ಮುಖ್ಯಾಂಶಗಳು:**

ಗ್ರಾಮ ಪಂಚಾಯಿತಿಗೆ ಹೋಲಿಸಿದರೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಮಾಡಲಾಗಿರುವ ತಿದ್ದುಪಡಿಗಳ ಸಂಖ್ಯೆ ಕಡಿಮೆಯಾಗಿದೆ. ಮೂಲ ಕಾಯಿದೆಯ 140ನೇ ಪ್ರಕರಣದಿಂದ ಆರಂಭಿಸಿ ತಾಲೂಕು ಪಂಚಾಯಿತಿಗೆ ಸಂಬಂಧಿಸಿದ ತಿದ್ದುಪಡಿಗಳನ್ನು ಮಾಡಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ನೀಡಿದೆ.

- **ಪ್ರಕರಣ 140 ರ ತಿದ್ದುಪಡಿ :** ಅಧ್ಯಕ್ಷ/ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ
- ಅವಿಶ್ವಾಸ ಗೊತ್ತುವಳಿಗೆ ಒಟ್ಟು ಚುನಾಯಿತ ಸದಸ್ಯರ ಅರ್ಧದಷ್ಟು ಜನರು ಸಹಿ ಹಾಕಬೇಕು.
- ಒಟ್ಟು ಚುನಾಯಿತ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬಹುಮತ ಇದ್ದಾಗ ಮಾತ್ರ ಅವಿಶ್ವಾಸ ಗೊತ್ತುವಳಿ ಸಿದ್ಧವಾಗುತ್ತದೆ.
- ಅಧ್ಯಕ್ಷರಾಗಿ ಆಯ್ಕೆಯಾದ ಎರಡು ವರ್ಷಗಳ ಒಳಗೆ ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿಲ್ಲ.
- **ಪ್ರಕರಣ 143 :** ತಾಲೂಕು ಪಂಚಾಯಿತಿ ಸಭೆಯಲ್ಲಿ ಸರಕಾರಿ ಅಧಿಕಾರಿಗಳ ಹಾಜರಾತಿ
- ಸರಕಾರಿ ಅಥವಾ ಸರಕಾರದ ಯಾವುದೇ ಸಮಿತಿ, ಕಂಪನಿ ಅಥವಾ ಸರಕಾರವು ಅಧಿಸೂಚಿಸಿದಂತೆ ಗ್ರಾಮೀಣ ಅಭಿವೃದ್ಧಿಯಲ್ಲಿ ಒಳಗೊಂಡ ನಿಗಮದ ಅಧಿಕಾರಿಗಳು ಕೂಡಾ ತಾಲೂಕು ಪಂಚಾಯಿತಿ ಸಭೆಯಲ್ಲಿ ಹಾಜರಾಗಬೇಕು.
- **ಪ್ರಕರಣ 145 ರ ತಿದ್ದುಪಡಿ :** ಈ ಮೂಲ ಪ್ರಕರಣವು ತಾಲೂಕು ಪಂಚಾಯಿತಿ ವಹಿಸಿರುವ ಪ್ರಕಾರ್ಯಗಳ ಕುರಿತಾಗಿದೆ. ತಿದ್ದುಪಡಿಯ ಮೂಲಕ ಅದನ್ನು ಇನ್ನಷ್ಟು ಬಲಪಡಿಸಲಾಗಿದೆ.
- ತಾಲ್ಲೂಕು ಪಂಚಾಯಿತಿಯು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯ ಘಟಕವಾಗಿ ಕಾರ್ಯನಿರ್ವಹಿಸುವುದಕ್ಕೆ ಅಗತ್ಯವಿರುವ ಅಧಿಕಾರ, ಪ್ರಾಧಿಕಾರ ಮತ್ತು ಸಿಬ್ಬಂದಿಗಳನ್ನು ರಾಜ್ಯವು ಹಣಕಾಸು ಲಭ್ಯತೆಗೆ ಒಳಪಟ್ಟಲ್ಲಿ ಪ್ರಧಾನ ಮಾಡಬೇಕು.

ANSSIRD & PR

- **ಪ್ರಕರಣ** 145ರ ಉಪ ಪ್ರಕರಣ 4 ರಲ್ಲಿ ತಾಲೂಕು ಪಂಚಾಯಿತಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಸ್ಪಷ್ಟಪಡಿಸಲಾಗಿದೆ. ತಾಲೂಕು ಪಂಚಾಯಿತಿ ವ್ಯವಸ್ಥೆಗೆ ಒಟ್ಟು 16 ಪ್ರಕಾರ್ಯಗಳನ್ನು ನೀಡಲಾಗಿದೆ ಈ ಪ್ರಕಾರ್ಯಗಳು ಅನುಸೂಚಿ 2ಕ್ಕೆ ಪೂರಕವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳು ಹೀಗಿವೆ.
- ತಾಲೂಕು ಪಂಚಾಯಿತಿ ವ್ಯಾಪ್ತಿಯ ಸಾಮಾಜಿಕ ಆರ್ಥಿಕ ದತ್ತಾಂಶಗಳ ಸಂಗ್ರಹ, ಕ್ರೋಢೀಕರಣ ಮತ್ತು ಇಂಧೀಕರಣ(update)
- ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳನ್ನು ಖಾತರಿ ಪಡಿಸುವಲ್ಲಿ ಗ್ರಾಮಪಂಚಾಯಿತಿ ಹೊಣೆಗಾರಿಕೆಗಳ ಮೇಲ್ವಿಚಾರಣೆ
- ತಾಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಆಸ್ಪತ್ರೆ, ಚಿಕಿತ್ಸಾಲಯಗಳು ಮತ್ತು ಪಾಲಿ ಕ್ಲಿನಿಕ್‌ಗಳ ಮೇಲ್ವಿಚಾರಣೆ
- ಸರಕಾರಿ ಶಾಲೆ, ಆಶ್ರಮ ಶಾಲೆ, ವಿದ್ಯಾರ್ಥಿನಿಲಯಗಳು, ಅನಾಥಾಶ್ರಮ, ಸರಕಾರಿ ವೃತ್ತಿ ತರಬೇತಿ ಸಂಸ್ಥೆ, ಗ್ರಂಥಾಲಯಗಳಿಗೆ ಉತ್ತೇಜನ ಮತ್ತು ಮೇಲ್ವಿಚಾರಣೆ
- ಹೋಂ ಸ್ಟೇ, ಪ್ರವಾಸಿತಾಣಗಳು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು, ಆಹಾರ ದಾಸ್ತಾನು, ಆಹಾರ ಸಂಸ್ಕರಣೆ ಇತ್ಯಾದಿ ಗ್ರಾಮೀಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ಸ್ವಯಂ ಉದ್ಯೋಗಕ್ಕೆ ಅವಕಾಶ ಕಲ್ಪಿಸುವುದು.
- ತಾಲ್ಲೂಕು ಮಟ್ಟದಲ್ಲಿ ಮಹಿಳಾ ಸಹಕಾರ ಬ್ಯಾಂಕ್ ಸ್ಥಾಪನೆಗೆ ಉತ್ತೇಜನ
- ಜೀವ ವೈವಿಧ್ಯ ಸಂರಕ್ಷಣೆ, ಮತ್ತು ಬಹು ಗ್ರಾಮ ಘನ ದ್ರವ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ವಹಣೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೆರವು ನೀಡುವುದು.
- ಶುದ್ಧ ಕುಡಿಯುವ ನೀರಿನ ಪೂರೈಕೆ, ನಿರಂತರ ವಿದ್ಯುತ್ ಪೂರೈಕೆ ಸಾಧ್ಯವಾಗುವಂತೆ ಮಾಡುವುದು.
- ಸಂಭವನೀಯ ವಿಕೋಪಗಳ ನಿರ್ವಹಣೆಗೆ ಸಜ್ಜಾಗಿರುವುದು
- ಸಮಾಜದ ಎಲ್ಲಾ ವರ್ಗಗಳ ಸಾಂಸ್ಕೃತಿಕ, ಸಾಮಾಜಿಕ ಆಚರಣೆಗಳು ಮತ್ತು ಕೌಶಲ್ಯಗಳಿಗೆ ಉತ್ತೇಜನ.
- ಗ್ರಾಮ ಪಂಚಾಯಿತಿಗಳ ಅಗತ್ಯ ಹಾಗೂ ಕೋರಿಕೆಗಳಿಗೆ ಸ್ಪಂದನೆ.
- ಜನಗಣತಿ, ಜಾನುವಾರು ಗಣತಿ, ನಿರುದ್ಯೋಗ ಗಣತಿ, ಬಿಪಿಎಲ್ ಗಣತಿಗಳ ಜವಾಬ್ದಾರಿಗಳ ನಿರ್ವಹಣೆ.
- ವಾಸ್ತವ ಸ್ಥಿತಿಯ ಸಮೀಕ್ಷೆ ಆಧರಿಸಿ ದೂರದೃಷ್ಟಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಅನುಷ್ಠಾನ ಮಾಡುವುದು
- ಈ ಮೇಲಿನ ಅಂಶಗಳ ಜೊತೆಗೆ 145 ಎ ನಿಂದ 145 ಡಿ ವರೆಗೆ ಹೊಸ ಪ್ರಕರಣಗನ್ನು ಸೇರ್ಪಡೆ ಮಾಡಲಾಗಿದೆ. 145 ಎ ಪ್ರಕರಣದಲ್ಲಿ ದೂರದೃಷ್ಟಿ ಯೋಜನೆಗಳ ಕ್ರೋಢಿಕರಣ ಮತ್ತು ಸಮಗ್ರಗೊಳಿಸುವಿಕೆ 145 ಬಿ ಪ್ರಕರಣದಲ್ಲಿ ಅಪಾಯಕಾರಿ ಕಲ್ಲುಗಣಿಗಾರಿಕೆ, ಕೊಳವೆಬಾವಿಗಳು, ತೆರೆದಬಾವಿಗಳು ಮತ್ತು ಗುಂಡಿಗಳ ನಿಯಂತ್ರಣ, 145 ಸಿ ಪ್ರಕರಣದಲ್ಲಿ ಜೀವ ವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆ ಮತ್ತು 145 ಡಿ ಪ್ರಕರಣದಲ್ಲಿ ಮಾಹಿತಿಗಳ ನಿರ್ವಹಣೆ ಕುರಿತು ವಿವರಗಳನ್ನು ನೀಡಿದೆ.

ANSSIRD & PR

- **ಪ್ರಕರಣ 152 :** ತಾಲೂಕು ಪಂಚಾಯಿತಿ ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು:
- ಪ್ರಕೃತಿ ವಿಕೋಪಗಳಿಂದ ನೊಂದವರಿಗೆ ಪರಿಹಾರ ನೀಡುವ ಉದ್ದೇಶಕ್ಕಾಗಿ ತಾಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ವರ್ಷದಲ್ಲಿ ರೂ ಒಂದು ಲಕ್ಷದವರೆಗೆ ಮಂಜೂರಾತಿ ಅಧಿಕಾರ ನೀಡಲಾಗಿದೆ. (ಮೊದಲು ರೂ 25 ಸಾವಿರ ಇತ್ತು)
- **ಪ್ರಕರಣ 154ರ ತಿದ್ದುಪಡಿ** : ಕರಾರುಗಳನ್ನು ಮಾಡಿಕೊಳ್ಳುವ ವಿಧಾನ : ತಾಲೂಕು ಪಂಚಾಯಿತಿಯ ಪರವಾಗಿ ಮಾಡಲಾಗುವ ಕಾಮಗಾರಿ ನಿರ್ವಹಣೆ ಅಥವಾ ಸರಕುಗಳು, ಸೇವೆಗಳ ಪೂರೈಕೆಯ ಕರಾರು ಒಪ್ಪಂದಗಳನ್ನು ಕೆಟಿಟಿಪಿ ಅಧಿನಿಯಮ 1999ರ ಉಪಬಂಧಗಳಿಗೆ ಅನುಸಾರವಾಗಿಯೇ ಮಾಡಬೇಕು.

**ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದ ತಿದ್ದುಪಡಿಗಳು**

ಮೂಲ ಕಾಯಿದೆಯಲ್ಲಿ 158ನೇ ಪ್ರಕರಣದಿಂದ ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದ ನಿಯಮಾವಳಿಗಳು ದಾಖಲಾಗಿವೆ. ಈ ಮೂಲ ಕಾಯಿದೆಯ ಪ್ರಕರಣ 160 ರಿಂದ ತಿದ್ದುಪಡಿಗಳು ಆಗಿರುವುದನ್ನು ಗಮನಿಸಬೇಕು.

- **ಪ್ರಕರಣ 161 ರ ತಿದ್ದುಪಡಿ**: ಚುನಾಯಿತ ಸದಸ್ಯರ ಸಂಖ್ಯೆ
- ಒಂದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಚುನಾಯಿತರಾದ 20 ಕ್ಕೂ ಕಡಿಮೆ ಇಲ್ಲದಂತೆ ವ್ಯಕ್ತಿಗಳು ಇರತಕ್ಕದ್ದು ಎಂದು ಸ್ಪಷ್ಟಪಡಿಸಿದೆ.
- ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ 35 ಸಾವಿರ ದಿಂದ 40 ಸಾವಿರ ಜನಸಂಖ್ಯೆಗೆ ಒಟ್ಟು ಜಿಲ್ಲಾ ಪಂಚಾಯಿತಿ ಸದಸ್ಯರು ಇರಬೇಕು ಎಂದು ತಿದ್ದುಪಡಿ ಮಾಡಲಾಗಿದೆ.
- **ಪ್ರಕರಣ 171 ರ ತಿದ್ದುಪಡಿ:** ಚುನಾವಣೆಗೆ ಸಂಬಂಧಪಟ್ಟ ಪ್ರಕರಣಗಳು
- ಚುನಾವಣೆಗೆ ಸಂಬಂಧಿಸಿದ ಆಕ್ಷೇಪಗಳನ್ನು ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)ರ ಬದಲಿಗೆ ಗೊತ್ತುಪಡಿಸಿದ ನ್ಯಾಯಾಲಯಕ್ಕೆ ದಾಖಲಿಸುವ ಕುರಿತ ತಿದ್ದುಪಡಿ
- **ಪ್ರಕರಣ 175 ರ ತಿದ್ದುಪಡಿ :** ದುರ್ವರ್ತನೆಗಾಗಿ ಸದಸ್ಯರನ್ನು ತೆಗೆದು ಹಾಕುವುದು: ಈ ಪ್ರಕರಣಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡಿದ್ದು ಹೆಚ್ಚಿನ ಸ್ಪಷ್ಟತೆಯನ್ನು ತರಲಾಗಿದೆ. ಈ ಕೆಳಗೆ ತಿಳಿಸಿರುವ ಸಂದರ್ಭಗಳು ಜಿಲ್ಲಾ ಪಂಚಾಯಿತಿ ಸದಸ್ಯರನ್ನು ತೆಗೆದು ಹಾಕಲು ಕಾರಣಗಳಾಗುತ್ತವೆ.
- ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆ ಅಥವಾ ತಲೆ ತಗ್ಗಿಸುವಂತಹ ತಪ್ಪನ್ನು ಎಸಗಿದಾಗ
- ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅಸಮರ್ಥರೆಂದು ವೈದ್ಯಾಧಿಕಾರಿಯು ಪ್ರಮಾಣೀಕರಿಸಿದಾಗ
- ದಿವಾಳಿ ಅಥವಾ ಅಸ್ವಸ್ಥನಾಗಿದ್ದು ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ತೋರಿಸುವುದು ಅಥವಾ ಅಸಮರ್ಥರಾದಾಗ
- ಪಂಚಾಯತ್‌ನ ನಾಲ್ಕು ಸತತವಾದ ಸಭೆಗಳಿಗೆ ಗೈರು ಹಾಜರಾದಾಗ
- ಅಧ್ಯಕ್ಷ / ಉಪಾಧ್ಯಕ್ಷರು ಅಗತ್ಯವಾಗಿ ಸಭೆ ಕರೆಯಬೇಕಾದ ಸಂದರ್ಭದಲ್ಲಿ ಸತತವಾಗಿ ಎರಡು ಸಭೆಗಳನ್ನು ಕರೆಯಲು ವಿಫಲರಾದಾಗ

ANSSIRD & PR

- ಮೂರೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗಳ ಸಂದರ್ಭದಲ್ಲಿ ಮತದಾರರ ಅಥವಾ ಸದಸ್ಯರನ್ನು ಸೆಳೆಯಲು ದಬ್ಬಾಳಿಕೆ ಅಥವಾ ವಂಚನೆ ಮಾಡಿದಾಗ

- ಪಂಚಾಯತಿಯ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಕುಟುಂಬದ ಹತ್ತಿರದ ಸಂಬಂಧಿಗಳು ಅಥವಾ ಯಾವೊಬ್ಬ ವ್ಯಕ್ತಿಯ ಜೊತೆ ಪ್ರತ್ಯಕ್ಷವಾಗಿ ತೊಡಗುವುದು ಅಥವಾ ಪಾಲುದಾರರಾಗಿ ಪಾಲ್ಗೊಂಡಾಗ

ಈ ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಆರೋಪಿತ ಸದಸ್ಯರಿಗೆ ತಮ್ಮ ಅಹವಾಲನ್ನು ಕೇಳಿಕೊಳ್ಳಲು ಅವಕಾಶ ಕೊಟ್ಟ ಮೇಲೆ ಅವರ ಸದಸ್ಯತ್ವವನ್ನು ರದ್ದುಪಡಿಸಲು ಸರಕಾರಕ್ಕೆ ಶಿಫಾರಸ್ಸು ಮಾಡಬಹುದು. ಹೀಗೆ ತೆಗೆದು ಹಾಕಲಾದ ಸದಸ್ಯ/ ಉಪಾಧ್ಯಕ್ಷ / ಅಧ್ಯಕ್ಷರು ಮುಂದಿನ ಐದು ವರ್ಷಗಳ ಅವಧಿಗೆ ಅಧಿನಿಯಮದ 12ನೇ, 124ನೇ ಮತ್ತು 167ನೇ ಪ್ರಕರಣದಲ್ಲ ಹೇಳಿರುವ ಚುನಾವಣೆಗೆ ಸ್ಪರ್ಧಿಸುವಂತಿಲ್ಲ.

- **ಪ್ರಕರಣ 175 ಎ:** ಸದಸ್ಯರಿಂದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಘೋಷಣೆ: ಈಗಾಗಲೇ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ನೀಡಲಾಗಿರುವ ಎಲ್ಲ ನಿಯಮಗಳು ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಮಚಾಯಿತಿ ಸದಸ್ಯರಿಗೂ ಅನ್ವಯವಾಗುತ್ತದೆ. ಜಿಲ್ಲಾ ಪಂಚಾಯಿತಿ ಸದಸ್ಯರು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿ ವರ್ಷ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಗಳನ್ನು ದಾಖಲಿಸಬೇಕು. ಅವರು ಅದನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಬೇಕು

- **ಪ್ರಕರಣ 175 ಬಿ :** ಆಸ್ತಿ ಘೋಷಿಸಲು ತಪ್ಪಿದಲ್ಲಿ ಪ್ರಕರಣ 175 ಬಿ ಪ್ರಕಾರ ಅವರ ಸದಸ್ಯತ್ವವನ್ನು ರದ್ದು ಮಾಡುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಲಾಗಿದೆ.

ಅಲ್ಲದೆ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಪ್ರತಿನಿಧಿಯಾಗಿದ್ದು, ಅವರು ಪಕ್ಷವು ನೀಡುವ ವಿಫ್ ನೋಟೀಸ್‌ನ್ನು ಪಡೆಯುವುದನ್ನು ತಪ್ಪಸಿಕೊಂಡಲ್ಲಿ ಅಥವಾ ವಿಫ್ ಉಲ್ಲಂಘನೆ ಮಾಡಿ ಮತದಾನ ಮಾಡಿದಲ್ಲಿ ಅಂತಹ ಸದಸ್ಯರ ಸದಸ್ಯತ್ವವನ್ನು ಚುನಾವಣಾ ಆಯೋಗವು ರದ್ದು ಮಾಡಲು ಅವಕಾಶ ಕಲ್ಪಿಸಲಾಗಿದೆ.

ANSSIRD & PR

- **ಪ್ರಕರಣ 178ರ ತಿದ್ದುಪಡಿ :** ಜಿಲ್ಲಾ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯೆಗಳಿಗೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿ ವಿವರಗಳಿವೆ. ಮೂಲ ಕಾಯಿದೆಗೆ ಒಂದು ಪ್ರಮುಖವಾದ ತಿದ್ದುಪಡಿಯನ್ನು ತರುವ ಮೂಲಕ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಯ ಘನತೆ ಮತ್ತು ಗೌರವವನ್ನು ಹೆಚ್ಚಸಲಾಗಿದೆ. ನೂತನ ತಿದ್ದುಪಡಿಯ ಪ್ರಕಾರ

- **ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ರಾಜ್ಯ ಸಚಿವರ ಸ್ಥಾನಮಾನವನ್ನು ಹೊಂದಿರತಕ್ಕದ್ದು, ಹಾಗೂ ನಿಯಮಿಸಬಹುದಾದಂತಹ ಸಂಬಳ ಮತ್ತು ಇನ್ನಿತರ ಉಪಲಬ್ದಗಳಿಗೆ ಹಕ್ಕುಳ್ಳವರಾಗಿರುತ್ತಾರೆ** ಎನ್ನುವ ಅಂಶವನ್ನು ಸೇರ್ಪಡೆ ಮಾಡಲಾಗಿದೆ.

- **ಪ್ರಕರಣ 179ರ ತಿದ್ದುಪಡಿ:** ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ಅವನನ್ನು ತೆಗೆದು ಹಾಕುವುದು

ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಅಧ್ಯಕ್ಷನ ಹುದ್ದೆಯನ್ನು ಸಣ್ಣ ಸಣ್ಣ ಅವಧಿಗೆ ಹಂಚಿಕೊಳ್ಳುವ ಪ್ರವೃತ್ತಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮೂಲ ಕಾಯಿದೆಗೆ ಕೆಲವು ತಿದ್ದುಪಡಿ ತರಲಾಗಿದೆ.

- ಜಿಲ್ಲಾ ಪಂಚಾಯಿತಿ ಅಧ್ಯಕ್ಷ / ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಬೇಕಾದರೆ ಒಟ್ಟು ಸದಸ್ಯರ ಪೈಕಿ ಅರ್ಧದಷ್ಟು ಸಂಖ್ಯೆಯ ಸದಸ್ಯರು ಸಹಿ ಹಾಕಬೇಕು.
- ಅವಿಶ್ವಾಸ ನಿರ್ಣಯ ಸಿಂಧುವಾಗಲು ಒಟ್ಟು ಚುನಾಯಿತ ಸದಸ್ಯರ ಪೈಕಿ 3ನೇ 2 ಭಾಗದಷ್ಟು ಸದಸ್ಯರ ಬಹುಮತ ಇರಬೇಕು.
- ಹುದ್ದೆಗೆ ಆಯ್ಕೆಯಾದ ನಂತರ 30 ತಿಂಗಳ ಒಳಗೆ ಮಂಡಿಸುವಂತಿಲ್ಲ.
- ಅವಿಶ್ವಾಸ ನಿರ್ಣಯ ಅಸಿಂಧುವಾದರೆ ಆನಂತರ ಎರಡು ವರ್ಷದವರೆಗೆ ಮರು ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿಲ್ಲ.
- **ಪ್ರಕರಣ 182ರ ತಿದ್ದುಪಡಿ :** ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಸರಕಾರಿ ಅಧಿಕಾರಿಗಳ ಹಾಜರಾತಿ
- ಸರಕಾರವು ಅಧಿಸೂಚಿಸಬಹುದಾದಂತೆ ಸರಕಾರದ ಅಥವಾ ಯಾವುದೇ ಸರಕಾರೀ ಸಮಿತಿಯ ಅಥವಾ ಕಂಪನಿಯ ಅಥವಾ ನಿಗಮದ ಅಧಿಕಾರಿಗಳ ಹಾಜರಾತಿ ಅಗತ್ಯಪಡಿಸುವ ಅಧಿಕಾರವನ್ನು ನೀಡಲಾಗಿದೆ.
- **ಪ್ರಕರಣ 184 ರ ತಿದ್ದುಪಡಿ: ಜಿಲ್ಲಾ ಪಂಚಾಯಿತಿಯ ಪ್ರಕಾರ್ಯಗಳು**
- ಜಿಲ್ಲಾ ಪಂಚಾಯಿತಿಯು ಸ್ಥಳೀಯ ಸ್ವಯಂ ಆಡಳಿತ ಸರಕಾರದ ಘಟಕವಾಗಿರಬೇಕು ಹಾಗೂ ಈ ರೀತಿ ಕಾರ್ಯನಿರ್ವಹಿಸಲು ಅಗತ್ಯವಿರುವ ಅಧಿಕಾರಗಳು, ಪ್ರಾಧಿಕಾರ, ಪ್ರಕಾರ್ಯಗಳು, ಸಿಬ್ಬಂದಿ ವರ್ಗ ಮತ್ತು ನಿಧಿಯನ್ನು ರಾಜ್ಯ ಸರಕಾರ ಒದಗಿಸಬೇಕು.
- ಅನುಸೂಚಿ 3 ರಲ್ಲಿ ತಿಳಿಸಿರುವ ಎಲ್ಲಾ ವಿಷಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಹೊಂದಿರಬೇಕು.

ಮೇಲಿನ ಅಂಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಜಿಲ್ಲಾ ಪಂಚಾಯಿತಿಯು ದೂರದೃಷ್ಟಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನ ಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

ANSSIRD & PR

- **ಪ್ರಕರಣ 191ರ ತಿದ್ದುಪಡಿ :** ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಅಧಿಕಾರಗಳು: ಮೂಲ ಕಾಯಿದೆಗೆ ತಿದ್ದುಪಡಿ ತಂದು ಜಿಲ್ಲಾ ಪಂಚಾಯಿತಿ ವ್ಯವಸ್ಥೆಗೆ ಸಂಬಂಧಿಸಿದಂತೆ 17 ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ವಹಿಸಲಾಗಿದೆ. ಈ ಪ್ರಕಾರ್ಯಗಳು ಜಿಲ್ಲಾ ಪಂಚಾಯಿತಿ ಒಂದು ಜಿಲ್ಲಾ ಸರಕಾರವಾಗಿ ಕಾರ್ಯನಿರ್ವಹಿಸುವುದಕ್ಕೆ ಪೂರಕವಾಗಿದೆ.
- **ಪ್ರಕರಣ 193ರ ತಿದ್ದುಪಡಿ :** ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು
- ಜಿಲ್ಲೆಯಲ್ಲಿ ಉಂಟಾದ ಪ್ರಕೃತಿ ವಿಕೋಪಗಳಿಂದ ತೊಂದರೆಗೀಡಾದವರಿಗೆ ಕೊಡುವ ಪರಿಹಾರವನ್ನು ಒದಗಿಸುವ ಉದ್ದೇಶಕ್ಕಾಗಿ ಒಂದು ವರ್ಷದಲ್ಲಿ ಒಟ್ಟು 5 ಲಕ್ಷ ರೂ. ಗಳವರೆಗೆ ಮಂಜೂರಾತಿ ನೀಡುವ ಅಧಿಕಾರವನ್ನು ನೀಡಲಾಗಿದೆ. ( ಈ ಹಿಂದೆ ಒಂದು ಲಕ್ಷದವರೆಗೆ ಮಾತ್ರ ಅಧಿಕಾರವಿತ್ತು)
- **ಪ್ರಕರಣ 195ರ ತಿದ್ದುಪಡಿ :** ಕರಾರುಗಳನ್ನು ಮಾಡಿಕೊಳ್ಳುವ ವಿಧಾನ:
- ಜಿಲ್ಲಾ ಪಂಚಾಯಿತಿ ಪರವಾಗಿ ಮಾಡಲಾಗುವ ಕಾಮಗಾರಿ ನಿರ್ವಹಣೆ ಮತ್ತು ಸರಕುಗಳು ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಮಾಡಿಕೊಳ್ಳುವ ಕರಾರುಗಳು ಕೆಟಿಟಿಪಿ ಅಧಿನಿಯಮ 1999ರ ಉಪಬಂಧಗಳಿಗೆ ಅನುಸಾರವಾಗಿ ಇರಬೇಕು.

## ರಾಜ್ಯ ಮಟ್ಟದ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳು

ಪಂಚಾಯಿತ್ ರಾಜ್ ವ್ಯವಸ್ಥೆಯ ಸಬಲೀಕರಣದ ದೃಷ್ಟಿಯಿಂದ ರಾಜ್ಯದ ಹಂತದಲ್ಲೂ ಕೆಲವು ಬದಲಾವಣೆಗಳನ್ನು ಕಾಯಿದೆ ತಿದ್ದುಪಡಿಯ ಮೂಲಕ ತರಲಾಗಿದೆ. ಈ ನಿಟ್ಟಿನಲ್ಲಿ ಪ್ರಕರಣ 232 ಎ ಮತ್ತು 232 ಬಿ ಯನ್ನು ಸೇರ್ಪಡೆ ಮಾಡಲಾಗಿದೆ.

- **ಪ್ರಕರಣ 232ಎ :** ಪಂಚಾಯತ್ ರಾಜ್ ಆಯುಕ್ತರ ಕಾರ್ಯಾಲಯ
- ಪಂಚಾಯತ್ ರಾಜ್ ಸುಗಮ ಕಾರ್ಯ ನಿರ್ವಹಣೆಯ ದೃಷ್ಠಿಯಿಂದ ಪಂಚಾಯತ್ ರಾಜ್ ಸೇವೆಗಳಿಗೆಂದು ಆಯುಕ್ತರ ಕಾರ್ಯಾಲಯವನ್ನು ಸರಕಾರವು ಸ್ಥಾಪಿಸಬೇಕು.
- ಈ ಆಯುಕ್ತಾಲಯದ ಅಧಿಕಾರಗಳು, ಪ್ರಕಾರ್ಯಗಳು ಕರ್ತವ್ಯಗಳು ಹಾಗೂ ಹುದ್ದೆಗಳ ಪ್ರವರ್ಗಗಳ ಸಂಖ್ಯೆ, ನೇಮಕಾತಿ ವಿಧಾನ, ಕನಿಷ್ಟ ಅರ್ಹತೆ ಇವುಗಳ ಕುರಿತು ನಿಯಮಾವಳಿಗಳನ್ನು ರೂಪಿಸಬೇಕು.
- **ಪ್ರಕರಣ 232 ಬಿ:** ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆಯ ಸ್ಥಾಪನೆ:
- ಸರಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಂತಹ ಹುದ್ದೆಗಳನ್ನು ಒಳಗೊಂಡ ಕರ್ನಾಟಕ ಪಂಚಾಯತ್ ರಾಜ್ ಆಡಳಿತಾತ್ಮಕ ಸೇವೆಯನ್ನು ರಚಿಸಬೇಕು. ಅಂತಹ ಹುದ್ದೆಗಳ ಸಂಖ್ಯೆ, ವೇತನ ಶ್ರೇಣಿ, ನೇಮಕಾತಿ ವಿಧಾನ ಮತ್ತು ಕನಿಷ್ಟ ವಿದ್ಯಾರ್ಹತೆ ಕುರಿತು ನಿಯಮಾವಳಿ ಇರಬೇಕು.
- **ಪ್ರಕರಣ 267ರ ತಿದ್ದುಪಡಿ:** ಹಣಕಾಸು ಆಯೋಗ
- ಹಣಕಾಸು ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸ್ಸನ್ನು ಅದರ ಮೇಲೆ ಕೈಗೊಂಡ ಕ್ರಮದ ಬಗೆಗಿನ ವಿವರಣಾತ್ಮಕ ಜ್ಞಾಪನ ಪತ್ರದ ಸಹಿತ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ **"**ಆರು ತಿಂಗಳ ಅವಧಿಯ ಒಳಗೆ**"** ಮಂಡಿಸತಕ್ಕದ್ದು.
- **ಪ್ರಕರಣ** 296ಕ್ಕೆ ಹೆಚ್ಚುವರಿಯಾಗಿ 296 ಎ ನಿಂದ 296 ಐ ವರೆಗಿನ ಪ್ರಕರಣಗಳನ್ನು ಸೇರ್ಪಡೆ ಮಾಡಲಾಗಿದೆ.
- **ಪ್ರಕರಣ 296 ಬಿ :** ಕುಂದುಕೊರತೆ ನಿವಾರಣಾ ಪ್ರಾಧಿಕಾರ
- ರಾಜ್ಯ ಸರಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ ಇಲಾಖೆಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಲ್ಲಿ ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರದ ಸ್ಥಾಪನೆಗೆ ಅಗತ್ಯ ಕ್ರಮ ವಹಿಸಬೇಕು.
- ಈ ಪ್ರಾಧಿಕಾರಕ್ಕೆ ನಿವೃತ್ತ ಜಿಲ್ಲಾ ನ್ಯಾಯಾದೀಶ ಅಥವಾ ವಿಶೇಷ ಡೆಪ್ಯುಟಿ ಕಮಿಷನರ್ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯನ್ನು ಪ್ರಾಧಿಕಾರಿಯಾಗಿ ನೇಮಿಸಬೇಕು.
- **ಪ್ರಕರಣ 296 ಬಿ :** ಕುಂದುಕೊರತೆ ನಿವಾರಣಾ ಪ್ರಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು:
- ಈ ಪ್ರಕರಣದಲ್ಲಿ ಜಿಲ್ಲಾ ಮಟ್ಟದಲ್ಲಿ ರಚನೆಗೊಳ್ಳುವ ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ವಿವರಿಸಲಾಗಿದೆ.
- ಮುಂದುವರಿದು, 296 ಸಿ ಪ್ರಕರಣದಲ್ಲಿ ಅಪೀಲುಗಳ ಪ್ರಕ್ರಿಯೆ, 296 ಡಿ ಪ್ರಕರಣದಲ್ಲಿ ಪ್ರಾಧಿಕಾರದ ಅಧಿಕಾರಾವಧಿ, 296 ಇ ನಲ್ಲಿ ರಾಜೀನಾಮೆ ಮತ್ತು ತೆಗೆದು ಹಾಕುವ ಪ್ರಕ್ರಿಯೆ, 296 ಎಫ್‌ನಲ್ಲಿ

ANSSIRD & PR

ಕುಂದುಕೊರತೆಗಳ ನಿವಾರಣಾ ಪ್ರಕ್ರಿಯೆಗಳು ಮತ್ತು ವಿಧಾನಗಳು, 296 ಜಿ ನಲ್ಲಿ ತನಿಖೆಗೆ ಒಳಪಡದ ವಿಷಯಗಳು, ಪ್ರಕರಣ 296 ಹೆಚ್‌ನಲ್ಲಿ ಬಾಕಿ ಪ್ರಕರಣಗಳ ವರ್ಗಾವಣೆ, 296 ಐನಲ್ಲಿ ಕೈಗೊಂಡ ಕ್ರಮದ ವರದಿ ಕುರಿತಂತೆ ವಿವರಗಳಿವೆ. ಇಲಾಖೆಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರಧಾಯಿತ್ವವನ್ನು ತರಲು ಇದೊಂದು ವಿಶೇಷ ಪ್ರಯತ್ನವಾಗಿದೆ.

ಹಾಗೆಯೇ 309 ಎ ಯಿಂದ 309 ಹೆಚ್ ವರೆಗೆ ಹೊಸ ಪ್ರಕರಣಗಳ ಸೇರ್ಪಡೆಯನ್ನು ಮಾಡಲಾಗಿದೆ. ಈ ಪ್ರಕರಣಗಳು ಪಂಚಾಯತ್‌ಗಳಿಗೆ ವಿಕೇಂದ್ರಿಕರಣ ಯೋಜನೆ ಸಿದ್ಧಪಡಿಸುವುದನ್ನು ಕಡ್ಡಾಯಗೊಳಿಸುತ್ತದೆ. ಅಲ್ಲದೆ ಈ ರೀತಿಯ ಯೋಜನೆ ಸಿದ್ಧಪಡಿಸುವ ವಿಧಿ–ವಿಧಾನಗಳ ಕುರಿತು ಮಾಹಿತಿಯನ್ನು ಒದಗಿಸುತ್ತವೆ. ಈ ಪ್ರಕರಣಗಳ ಪೈಕಿ ಪ್ರಕರಣ 309 ಡಿ ಯಲ್ಲಿ **"ತಾಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿ"** ಯ ರಚನೆ ಕುರಿತಾದ ವಿವರಗಳಿವೆ. 309 ಇ ನಲ್ಲಿ ಯೋಜನೆ ಮತ್ತು ಅಭಿವೃದ್ಧಿಯ ಕಾಯಿದೆ ವಿಧಾನ, 309 ಎಫ್ ನಲ್ಲಿ ಜಿಲ್ಲಾ ಪಂಚಾಯತ್ ಯೋಜನೆ ಮತ್ತು 309 ಜಿ ನಲ್ಲಿ ಜಿಲ್ಲಾ ಅಭಿವೃದ್ಧಿ ಯೋಜನೆ, 309 ಹೆಚ್‌ನಲ್ಲಿ ಯೋಜನೆ ಕುರಿತು ಕೈಗೊಂಡ ಕ್ರಮದ ವರದಿ ಕುರಿತು ದಾಖಲಿಸಲಾಗಿದೆ.

- **ಪ್ರಕರಣ 310ರ ತಿದ್ದುಪಡಿ: ಜಿಲ್ಲಾ ಯೋಜನಾ ಸಮಿತಿ**
- ತಿದ್ದುಪಡಿಯ ಪ್ರಕಾರ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಜಿಲ್ಲಾ ಯೋಜನಾ ಸಮಿತಿಯ ಸದಸ್ಯರಾಗಿರುತ್ತಾರೆ.
- ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರನ್ನು ಸರಕಾರವು ನೇಮಿಸಬಹುದಾದ ವಿಧಾನದಲ್ಲಿ ಆಯ್ಕೆ ಮಾಡಬೇಕು.

ಉಳಿದಂತೆ ಜಿಲ್ಲಾ ಯೋಜನಾ ಸಮಿತಿಯಲ್ಲಿ ಯಾರು ಸದಸ್ಯರಾಗಿರುತ್ತಾರೆ ಎನ್ನುವ ಎಲ್ಲಾ ವಿವರಗಳನ್ನು ಈ ಪ್ರಕರಣದಲ್ಲಿ ಸ್ಪಷ್ಟ ಪಡಿಸಲಾಗಿದೆ.

- **ಪ್ರಕರಣ 310 ಎ ತಿದ್ದುಪಡಿ:** ಈ ಪ್ರಕರಣವು ರಾಜ್ಯ ಪಂಚಾಯತ್ ಪರಿಷತ್ ರಚನೆಗೆ ಸಂಬಂಧಪಟ್ಟಿದೆ ನೂತನ ತಿದ್ದುಪಡಿ ಪ್ರಕಾರ
- ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರು ರಾಜ್ಯ ಪಂಚಾಯತ್ ಪರಿಷತ್‌ನ ಸದಸ್ಯರಾಗುತ್ತಾರೆ.
- ಪ್ರತಿ ಕಂದಾಯ ವಿಭಾಗದಿಂದ ಒಬ್ಬರು ಗ್ರಾಮ ಪಂಚಾಯಿತಿ ಅಧ್ಯಕ್ಷರು ರಾಜ್ಯ ಪಂಚಾಯತ್ ಪರಿಷತ್ ಸದಸ್ಯರಾಗಿರುತ್ತಾರೆ.
- **ಪ್ರಕರಣ 310 ಬಿ ಸೇರ್ಪಡೆ:** ಮೂಲ ಅಧಿನಿಯಮಕ್ಕೆ ಹೊಸದಾಗಿ ಪ್ರಕರಣ 310 ಬಿ ಯನ್ನು ಸೇರ್ಪಡೆಗೊಳಿಸಿದ್ದು, ಈ ಪ್ರಕರಣವು ರಾಜ್ಯ ಮಟ್ಟದಲ್ಲಿ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಸ್ಥಾಪನೆಯನ್ನು ಕಡ್ಡಾಯಗೊಳಿಸುತ್ತದೆ.
- ರಾಜ್ಯದ ಮುಖ್ಯಮಂತ್ರಿ ಇದರ ಅಧ್ಯಕ್ಷರಾಗಿರುತ್ತಾರೆ
- ಗ್ರಾಮೀಣಾಭಿವೃದ್ಧಿ ಸಚಿವರು, ಹಣಕಾಸು ಸಚಿವರು, ಯೋಜನಾ ಸಚಿವರು, ನಗರಾಭಿವೃದ್ಧಿ ಸಚಿವರು ಮತ್ತು ಸರಕಾರದಿಂದ ನಾಮ ನಿರ್ದೇಶನಗೊಂಡ ಒಬ್ಬ ಸರಕಾರೇತರ ಅಭಿವೃದ್ಧಿ ತಜ್ಞರು ಸಮಿತಿಯ ವೈಸ್ ಚೇರ್‌ಮನ್‌ಗಳಾಗಿರುತ್ತಾರೆ.
- ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರಕಾರದ ಪ್ರಧಾನ ಕಾರ್ಯದರ್ಶಿ / ಸರಕಾರದ ಕಾರ್ಯದರ್ಶಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.
- ಸದಸ್ಯರಾಗಿ ವಿವಿಧ ಹಂತಗಳ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ANSSIRD & PR

ಈ ಪ್ರಕರಣದಲ್ಲಿ ವಿಶೇಷವಾಗಿ ಸ್ಥಾಪನೆಗೊಳ್ಳಬೇಕಿರುವ "ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ"ಯ ಪ್ರಕಾರ್ಯಗಳನ್ನು ಸ್ಪಷ್ಟಪಡಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ 2015ರ ತಿದ್ದುಪಡಿಗಳು ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಡ ಮತ್ತು ಕ್ರಿಯಾಶೀಲಗೊಳಿಸುವ ಉದ್ದೇಶವನ್ನು ಹೊಂದಿವೆ. ಇದನ್ನು ಅರ್ಥೈಸಿಕೊಂಡು ಅಳವಡಿಸಿಕೊಂಡಾಗ ಮಾತ್ರ ಈ ತಿದ್ದುಪಡಿಗಳ ಹಿಂದಿನ ಆಶಯ ಸಾಕಾರಗೊಳ್ಳುತ್ತದೆ.

ಈ ಲೇಖನದಲ್ಲಿ ತಿದ್ದುಪಡಿಗಳ ಕುರಿತಾದ ಸಂಕ್ಷೀಪ್ತ ಅವಲೋಕನವನ್ನು ಮಾಡಲಾಗಿದೆ. ಹೆಚ್ಚುವರಿ ಮಾಹಿತಿಗಳಿಗೆ ಕಾಯಿದೆಯ ಪೂರ್ಣ ಪಾಠವನ್ನು ಅಧ್ಯಯನ ಮಾಡುವುದು ತುಂಬಾ ಅವಶ್ಯಕ. ಅದರಲ್ಲಿ ಮೂಲ ಕಾಯಿದೆ ಮತ್ತು ತಿದ್ದುಪಡಿಗಳ ಕುರಿತಾದ ಸಮಗ್ರ ಅಂಶಗಳು ಲಭ್ಯವಾಗುತ್ತದೆ. ಈ ನಿಟ್ಟಿನಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಪಂಚಾಯತ್ ರಾಜ್ ಕುರಿತು ಆಸಕ್ತಿ ಇರುವವರಲ್ಲಿ ಪ್ರೇರಣೆ ಉಂಟುಮಾಡುವ ಸಣ್ಣ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದ್ದೇನೆ.

**ಆಧಾರ:**

❖ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993.

* * * * *

ANSSIRD & PR

# ನೀತಿ ನಿರ್ದೇಶಕ ತತ್ವಗಳು

**ಅರಕಲಗೂಡು ಶ್ರೀ ಸಿ. ವಿಜಯಕುಮಾರ್***

ಪ್ರಜಾಪ್ರಭುತ್ವ ವ್ಯವಸ್ಥೆಗೆ ಮೂಲಭೂತ ಅಡಿಪಾಯ ಒದಗಿಸುವ, ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಚ್ಚು ಅಧಿಕಾರಯುಕ್ತವನ್ನಾಗಿ ಸದೃಢಗೊಳಿಸಲು ರಾಜ್ಯ ಸರ್ಕಾರವು ಮಹತ್ತರ ಹೆಜ್ಜೆಯನ್ನೆ ಇಟ್ಟಿದೆ. ಪರಿಣಾಮಕಾರಿ ಪ್ರಜಾಪ್ರಭುತ್ವದ ನಡಿಗೆಗೆ ಮುಂದಡಿ ಇಡಬೇಕೆಂಬ ಸಂಕಲ್ಪವನ್ನು ಸಾಕಾರಗೊಳಿಸುವ ಪ್ರಯತ್ನವಾಗಿ, ರಾಜ್ಯ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ಕ್ಕೆ ಎರಡನೇ ತಿದ್ದುಪಡಿಯನ್ನು ತಂದಿದೆ. ಗ್ರಾಮೀಣಾಭಿವೃದ್ಧಿಯ ಕಲ್ಪನೆಯನ್ನು ಪುನರ್ ವ್ಯಾಖ್ಯಾನಗೊಳಿಸುವ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಉತ್ತಮ, ಜನಪರ ಮತ್ತು ಪ್ರತಿಸ್ಪಂದನೆ ಆಡಳಿತ ವ್ಯವಸ್ಥೆಗೆ ಇಂಬು ಕೊಡುವ ಉದ್ದೇಶವನ್ನು ಹೊಂದಲಾಗಿದೆ. ಸಂವಿಧಾನದ 73ನೇ ತಿದ್ದುಪಡಿಯ ಅಂಶಗಳನ್ನು ಅವುಗಳ ಮೂಲ ಆಶಯದಂತೆ ಯಥಾವತ್ತಾಗಿ ಜಾರಿಗೆ ತರಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಣಿಗೊಳಿಸುವ ಪ್ರಯತ್ನವಾಗಿದೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯುವ ಚೈತನ್ಯವನ್ನು ಮತ್ತು ಮಹಿಳಾ ಶಕ್ತಿಯನ್ನು ಒಗ್ಗೂಡಿಸಿ ಸಾಮಾಜಿಕ ಬದಲಾವಣೆಯತ್ತ ದಿಟ್ಟ ಹೆಜ್ಜೆಯನ್ನಿಡಲು, ಕಾಯ್ದೆಯ ಹಲವಾರು ಪ್ರಕರಣಗಳಿಗೆ ತಿದ್ದುಪಡಿಯನ್ನು ತರಲಾಗಿದೆ.

ಪಂಚಾಯತ್ ಸಂಸ್ಥೆಗಳಿಗೆ ನೀತಿ ನಿರ್ದೇಶನಾ ತತ್ವಗಳನ್ನು ಭಾರತ ಸಂವಿಧಾನದಲ್ಲಿರುವಂತೆಯೇ ಈ ಮಸೂದೆಯ ಮೂಲಕ ಜಾರಿಗೆ ತರಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಶಾಸನಾತ್ಮಕ, ಕಾರ್ಯಕಾರಿ ಮತ್ತು ನ್ಯಾಯಿಕ ಕಾರ್ಯ ನಿರ್ವಹಣೆಯ ಅವಕಾಶವನ್ನು ಹೊಂದಿರಬೇಕೆಂಬ ಪ್ರಯತ್ನದಲ್ಲಿ, ಈ ಮಸೂದೆಯು ಜಾರಿಗೆ ಬಂದಿದೆ. ಹಲವಾರು ಹೊಸ ಪರಿಕಲ್ಪನೆಗಳನ್ನು ಜಾರಿಗೆ ತರುವ ಈ ಮಸೂದೆಯು ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ–ಘನತೆ ಕಾಪಾಡುವ ಸಮಾನತೆಯನ್ನು ಸುನಿಶ್ಚಿತಗೊಳಿಸುವ ಪಾರದರ್ಶಕ ವ್ಯವಸ್ಥೆಯನ್ನು, ಜನಸಹಭಾಗಿತ್ವದ ಮೂಲಕ ಅನುಷ್ಠಾನಗೊಳಿಸುವ ಮತ್ತು ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ, ಸಾಮಾಜಿಕ ವ್ಯವಸ್ಥೆ ರೂಪಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ದಿಸೆಯಲ್ಲಿ ಈ ತಿದ್ದುಪಡಿ ಅಸ್ತ್ರವಾಗಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ.

ಮೂಲ ಅಧಿನಿಯಮದ 1ನೇ ಅಧ್ಯಾಯಕ್ಕೆ ಹೊಸದಾಗಿ ಅಧ್ಯಾಯ 1'ಎ' ಸೇರ್ಪಡೆ ಮೂಲಕವಾಗಿ ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಪ್ರಕಟಿಸಲಾಗಿದೆ

ANSSIRD & PR

## ಅಧ್ಯಾಯ 1 'ಎ'

## ಪಂಚಾಯತ್ ನೀತಿ ನಿರ್ದೇಶಕ ತತ್ವಗಳು

**2'ಎ'. ಪಂಚಾಯತ್ ನೀತಿ ನಿರ್ದೇಶಕ ತತ್ವಗಳು –**

**(1) ಪಂಚಾಯಿತಿಯು ಈ ಮುಂದಿನವುಗಳಿಗೆ ಪ್ರೋತ್ಸಾಹಿಸಲು ಶ್ರಮಿಸತಕ್ಕದ್ದು, ಎಂದರೆ:–**

**(i) ಎಲ್ಲರಿಗೂ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಸಮುದಾಯದ ಜೀವನಮಟ್ಟವನ್ನು ಮತ್ತು ಬದುಕಿನ ಗುಣಮಟ್ಟವನ್ನು ಸುಧಾರಿಸುವುದು;**

---

*ತರಬೇತಿ ಸಮಾಲೋಚಕರು, ಅನಸಾ ರಾಗ್ರಾ&ಪಂರಾಸಂಸ್ಥೆ, ಮೈಸೂರು

ಗ್ರಾಮ ಪಂಚಾಯತ್ ಸ್ಥಾಪನೆಯ ಮೂಲ ಆಶಯವೇ, ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವುದು ಮತ್ತು ಸೇವೆಗಳನ್ನು ಒದಗಿಸುವುದಾಗಿದೆ. ಈ ಅಂಶಗಳ ತಳಹದಿಯ ಮೇಲೆ, ಮಾನವಾಭಿವೃದ್ಧಿ ಸೂಚ್ಯಂಕಗಳು ಗುರುತಿಸಲ್ಪಡುತ್ತವೆ. ಬದುಕಿನ ಗುಣಮಟ್ಟ ಸುಧಾರಿಸುವುದು ಎಂಬುದರ ಅರ್ಥ ಮತ್ತು ವ್ಯಾಪ್ತಿಯು ವಿಶಾಲವಾದುದಾಗಿದ್ದು, ನಾವುಗಳು ವಿಷದವಾಗಿ ಗ್ರಹಿಸಿಕೊಳ್ಳಬೇಕಾಗಿರುತ್ತದೆ. ಮಾನವನ ಅಭಿವೃದ್ಧಿಯಲ್ಲಿ ಶಿಕ್ಷಣ, ಉದ್ಯೋಗ, ಉತ್ತಮ ಜೀವನಾವಕಾಶಗಳು, ಲಿಂಗ ಸಮಾನತೆಯಂತಹ ಅಂಶಗಳಿಗೆ ಆಧ್ಯತೆಯಲ್ಲಿ ಒತ್ತು ನೀಡಬೇಕಾಗುತ್ತದೆ. ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಾನವಾಭಿವೃದ್ಧಿ ವರದಿಗಳು ಸಿದ್ಧವಾಗಿವೆ. ಮುಂದುವರಿದು ಲಭ್ಯ ದತ್ತಾಂಶಗಳ ಆಧಾರದಲ್ಲಿ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾನವಾಭಿವೃದ್ಧಿ ವರದಿಯ ಸೂಚ್ಯಂಕಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದಲ್ಲಿ ಉದ್ದೇಶಿತ ಗುರಿಗಳನ್ನು ತಲುಪಬಹುದಾಗಿದೆ.

**(ii) ಅಗತ್ಯ ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಗ್ರಾಮೀಣ ಸಮುದಾಯಗಳು ಮತ್ತು ಸಂಘಟನೆಗಳನ್ನು ತನ್ನ ಸುಧಾರಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು;**

ಪಂಚಾಯತ್ ರಾಜ್ ಸಂಸ್ಥೆಗಳ ಸ್ಥಾಪನೆಯ ಉದ್ದೇಶಿತ ಗುರಿಗಳಲ್ಲಿ ಅಗತ್ಯ ಗ್ರಾಮೀಣ ಸೇವೆಗಳನ್ನು ಒಗಿಸುವುದು ಪ್ರಮುಖ ಕರ್ತವ್ಯವಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿಗೆ ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳು ಮತ್ತು ಅನುದಾನದ ಮೂಲಗಳನ್ನು ಕ್ರೋಢೀಕರಿಸಿ ಗ್ರಾಮೀಣ ಭಾಗದಲ್ಲಿ ಅವಶ್ಯವಿರುವ ಮೂಲ ಸೌಲಭ್ಯಗಳನ್ನು ಸರ್ವಾಂಗೀಣ ಅಭಿವೃದ್ಧಿಗಾಗಿ ಬಲಪಡಿಸುವುದಾಗಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸಮುದಾಯದ ಮತ್ತು ಸ್ಥಳೀಯ ಸಂಘಟನೆಗಳ ಪಾತ್ರವು ಪ್ರಮುಖವಾಗಿರುತ್ತದೆ. ಈ ನಿಟ್ಟಿನಲ್ಲಿ ಸಮುದಾಯದೊಂದಿಗೆ, ವಿಶೇಷವಾಗಿ ಮಹಿಳಾ ಸ್ವ ಸಹಾಯ ಸಂಘಗಳು ಮತ್ತು ಸಮುದಾಯಾಧಾರಿತ ಸಂಸ್ಥೆಗಳನ್ನು ಯೋಜನೆಯ ರೂಪಿಸುವಿಕೆ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಅವಶ್ಯಕವಾಗಿದೆ. ಈ ಚಟುವಟಿಕೆಗಳಿಂದಾಗಿ ಗ್ರಾಮೀಣಾಭಿವೃದ್ಧಿಯ ಎಲ್ಲಾ ಹಂತಗಳಲ್ಲೂ ಸಮುದಾಯದ ಭಾಗವಹಿಸುವಿಕೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಖಾತರಿಪಡಿಸಿಕೊಳ್ಳುವ ಮೂಲಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸುಧಾರಣೆಯನ್ನು ನೋಡಬಹುದಾಗಿರುತ್ತದೆ.

ANSSIRD & PR

**(iii) ತನ್ನ ನಿವಾಸಿಗಳ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಆಸ್ತಿಗಳ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಪಂಚಾಯಿತಿ ಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ, ಸಾಮಾಜಿಕ ಸಮ್ಮಿಳನ ಮತ್ತು ಅರ್ಥಪೂರ್ಣ ಸಮುದಾಯವನ್ನು ತೊಡಗಿಸಿಕೊಳ್ಳುವುದು;**

ಗ್ರಾಮೀಣ ಪ್ರದೇಶವು ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಸ್ಥಿತಿಯನ್ನು, ನಗರ ಪ್ರದೇಶಗಳಿಗೆ ಹೋಲಿಸಿದಾಗ ನಿರೀಕ್ಷಿತವಾದಂತಹ ಅಭಿವೃದ್ಧಿಯನ್ನು ತಲುಪಿರುವುದಿಲ್ಲ. ಗ್ರಾಮೀಣ ಪ್ರದೇಶವು ತನ್ನ ಆರ್ಥಿಕ ಅಭಿವೃದ್ಧಿಗೆ ಪ್ರಮುಖವಗಿ ಕೃಷಿ ಮತ್ತು ತತ್ಸಂಬಂಧಿತ ಚುವಟಿಕೆಗಳನ್ನು ಅವಲಂಬಿಸಿವೆ. ಆದುದರಿಂದ ಪಂಚಾಯತ್ ರಾಜ್ ಸಂಸ್ಥೆಗಳು ಕೃಷಿಗೆ ಪೂರಕವಾದ ವಾತಾವರಣವನ್ನು ಉತ್ತಮಪಡಿಸುವುದರ ಮೂಲಕ ಗ್ರಾಮೀಣ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಬೇಕಾಗಿರುತ್ತದೆ. ಇದರ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬಗಳ ಸಾಮಾಜಿಕ ಪರಿಸ್ಥಿತಿಯನ್ನು ವೃದ್ಧಿಸಲು ಅವಶ್ಯಕವಿರುವ ಕ್ರಮಗಳನ್ನು ಕೈಗೊಳ್ಳಬೇಕಿರುತ್ತದೆ. ಇದರೊಂದಿಗೆ ಗ್ರಾಮೀಣ ಪ್ರದೇಶದಲ್ಲಿರುವ ಪ್ರಸ್ತುತ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ಭವಿಷ್ಯದ ಪೀಳಿಗೆಗಾಗಿ ಕಾಯ್ದುಕೊಳ್ಳಲು ಯೋಜನೆಗಳನ್ನು ರೂಪಿಸಬೇಕಾಗಿದೆ. ಯೋಜನೆಯನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಮಾಡಬೇಕಿರುತ್ತದೆ. ಯೋಜನೆ ತಯಾರಿಯ ಭಾಗೀದಾರರುಗಳಿಗೆ ವ್ಯವಸ್ಥಿತವಾಗಿ ಮಾಹಿತಿ

ಮತ್ತು ಪ್ರಚಾರ ಮಾಡುವುದರೊಂದಿಗೆ, ದೂರದೃಷ್ಟಿ ಯೋಜನೆ ತಯಾರಿಸಬೇಕೆನ್ನುವುದನ್ನು ಸ್ಪಷ್ಟಪಡಿಸಲಾಗಿದೆ. ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಸಮುದಾಯದ ಜನರು ಸಕ್ರೀಯವಾಗಿ ತೊಡಗಿಸಿಕೊಳ್ಳುವಂತೆ ಕ್ರಮಗಳನ್ನು ವಹಿಸಬೇಕಾಗಿರುತ್ತದೆ.

**(iv) ಪಂಚಾಯತ್ ಅಧೀನದಲ್ಲಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಂಡು ಪಂಚಾಯತಿ ಪ್ರದೇಶದ ಅರಣ್ಯ ಮತ್ತು ವನ್ಯ ಜೀವಿಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಮರ್ಪಕವಾಗಿ ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಸಮರ್ಥನೀಯ ವಿಧಾನವನ್ನು ಅನುಸರಿಸುವುದು;**

ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನೆಲ–ಜಲ, ಜೀವ ವೈವಿಧ್ಯ ಸಂಪನ್ಮೂಲಗಳು, ಅರಣ್ಯ ಮತ್ತು ವನ್ಯ ಜೀವಿಗಳ ಸಂರಕ್ಷಿಸುವ ನಿಟ್ಟಿನಲ್ಲಿ, ಗ್ರಾಮ ಪಂಚಾಯತ್‌ಗಳು, ಗ್ರಾಮೀಣ ಜನರು ಮತ್ತು ಸಂಬಂಧಿಸಿದ ಪ್ರಾಧಿಕಾರಿಗಳೊಂದಿಗೆ ಸಮನ್ವಯತೆ ಮಾಡುವ ಅಗತ್ಯವಿದೆ. ವಿಶೇಷವಾಗಿ ಮುಂದಿನ ಭವಿಷ್ಯದ ಪ್ರಜೆಗಳಾಗುವ ವಿದ್ಯಾರ್ಥಿಗಳು ಮತ್ತು ಯುವ ಜನರಲ್ಲಿ ಅರಿವು ಮೂಡಿಸಿ, ಜೀವ ಸಂಕುಲಗಳ ಸಂರಕ್ಷಣಾ ಕ್ರಮಗಳ ಪ್ರಾಥಮಿಕ ಹೆಜ್ಜೆಯಾಗಿ ಸಮೀಕ್ಷೆ, ಗುರುತಿಸುವಿಕೆ, ದಾಖಲೀಕರಣ, ಸಂಗ್ರಹಣೆ, ಅರಿವಿನ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮಾಡಬಹುದಾಗಿದೆ. ಗ್ರಾಮ ಪಂಚಾಯಿತಿಯ ಉಪ ಸಮಿತಿಗಳಲ್ಲಿ ಒಂದಾದ ಜೀವ ವೈವಿಧ್ಯ ಸಮಿತಿಗಳನ್ನು ಸಕ್ರೀಯಗೊಳಿಸಬಹುದಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಯ ನಿಧಿಗಳು ಮಾತ್ರವಲ್ಲದೇ ಸ್ಥಳೀಯ ದಾನಿಗಳ ನೆರವಿನಿಂದ ಸಂರಕ್ಷಣಾ ಕ್ರಮಗಳನ್ನು ಸಮರ್ಥನೀಯವಾಗಿ ನಿಭಾಯಿಸಬೇಕಾಗುತ್ತದೆ.

**(v) ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸುವುದು ಮತ್ತು ಕಾಪಾಡುವುದು ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡುವುದು;**

ಗ್ರಾಮೀಣ ಮಟ್ಟದ ಜಾನಪದ ಕಲೆಗಳು, ಇತರೆ ಪ್ರಾಕಾರಗಳು ಮತ್ತು ಕಲಾವಿದರು, ಭಾಷೆ, ಆರೋಗ್ಯಯುತ ಸಂಸ್ಕೃತಿ ಮತ್ತು ಆಚರಣೆಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಇರಾದೆ ಸರ್ಕಾರದ ಆಶಯವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಯುವ ಜನ ಸೇವಾ ಇಲಾಖೆಯ ನೆರವನ್ನು ಪಡೆದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು. ಅಲ್ಲದೇ ಗ್ರಾಮೀಣ ಪ್ರದೇಶದ ಹಲವೆಡೆ ಪ್ರಾಚೀನವಾದ, ಹಿರಿಯರು ಉಳಿಸಿಹೋದ ಆಸ್ತಿಗಳು, ನೈಸರ್ಗಿಕ ಸಿರಿಯನ್ನು ಸಹಜವಾಗಿಯೇ ಉಳಿಸಿಕೊಂಡು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಲ್ಲಿ ಪಂಚಾಯಿತಿಗಳಿಗೆ ಆದಾಯವಾಗಬಹುದು, ಮುಂದಿನ ಪೀಳಿಗೆಗೆ ಕೊಡುಗೆ ನೀಡಬಹುದಾಗಿದೆ. ಈ ನಿಟ್ಟಿನಲ್ಲಿ ಇತರೆ ಇಲಾಖೆಗಳು ಮತ್ತು ಆಸಕ್ತರೊಂದಿಗೆ ಸಮನ್ವಯ ಸಾಧಿಸಿ ಕಾರ್ಯಾಚರಣೆ ಮಾಡಬೇಕಾಗುವುದು. ಹಿಂದಿನ ಭವ್ಯ ಪರಂಪರೆ, ಇತಿಹಾಸ, ಕಲೆ ಮತ್ತು ಸಂಸ್ಕೃತಿಯ ಮಹತ್ವದ ಕುರಿತು ವಿದ್ಯಾರ್ಥಿಗಳು ಮತ್ತು ಯುವಜನರಿಗೆ ಅರಿವು ಮೂಡಿಸಿದಲ್ಲಿ ಸಂರಕ್ಷಣಾ ಕಾರ್ಯಗಳು ಸರಳವಾಗುವುದು.

**(vi) ನವಣೆ, ಸಜ್ಜೆ, ಬಿಳಿ ಜೋಳ, ಸಾಮೆ, ಸಾವೆ, ಕೋರ್ಲಿ ಇತ್ಯಾದಿ ಮತ್ತು ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳಂಥ ದೇಶಿ ವೈವಿಧ್ಯತೆಯುಳ್ಳ ಬೀಜಗಳನ್ನು ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು ಮತ್ತು ಹಂಚಿಕೆ ಮಾಡುವುದು;**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೈವಿಧ್ಯ ಪೂರ್ಣ ಆಹಾರ ಬೆಳೆ ಪದ್ಧತಿಗಳಿವೆ. ಔಷಧೀಯ ಸಸ್ಯ ರಾಶಿಯಿದೆ. ಪೋಷಕಾಂಶಯುಕ್ತ, ಗುಣಮಟ್ಟದ ಸಸ್ಯ ಮತ್ತು ಜಾನುವಾರು ತಳಿಗಳಿವೆ. ಇವೆಲ್ಲವುಗಳನ್ನು ಜತನದಿಂದ ಕಾಪಾಡುವ ಮತ್ತು ಅಭಿವೃದ್ಧಿಪಡಿಸುವ ದೊಡ್ಡ ಹೊಣೆಗಾರಿಕೆ ಸ್ಥಳೀಯ ಸರ್ಕಾರ ಮತ್ತು ಭಾಗೀದಾರರ ಮೇಲಿದೆ. ಇದಕ್ಕಾಗಿ ಸ್ಥಳೀಯ ಮಟ್ಟದಲ್ಲಿ ಕೃಷಿಕರು, ಆರೋಗ್ಯಕರ ಪದ್ಧತಿ ಅನುಸರಿಸುವ ಪಾರಂಪರಿಕ ವೈದ್ಯರು, ಯುವಜನರು ಮತ್ತು ಸ್ವ ಸಹಾಯ ಗುಂಪುಗಳನ್ನು ಸಂಘಟಿಸಿ ಅಗತ್ಯ ನೆರವುಗಳನ್ನು ನೀಡಬೇಕಾದ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶದಲ್ಲಿ ಕ್ರಿಯಾಶೀಲವಾಗಿರುವ ಸಾವಯವ ಕೃಷಿಕರ ಸಂಘ, ಗ್ರಾಮ ಅರಣ್ಯ ಸಮಿತಿಗಳನ್ನು

ANSSIRD & PR

ಉತ್ತೇಜಿಸಬೇಕಿದೆ. ಬೀಜ ಬ್ಯಾಂಕುಗಳ ಸ್ಥಾಪನೆಯಿಂದ ದೇಶಿ ವೈವಿಧ್ಯತೆಯುಳ್ಳ ಬೀಜಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗುವುದು.

**(vii)ಕೃಷಿ–ಕೈಗಾರಿಕಾ ಕೇಂದ್ರಗಳು, ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತೇಜಿಸುವ ಮೂಲಕ ಉದ್ಯೋಗಗಳನ್ನು ಸೃಜಿಸುವುದು ಮತ್ತು ವ್ಯವಹಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದಕ್ಕಾಗಿ ದಸ್ತಾವೇಜುಗಳನ್ನು ಸ್ವೀಕರಿಸುವ ಏಕ ಗವಾಕ್ಷಿ ವ್ಯವಸ್ಥೆ ಮಾಡುವುದು;**

ಗ್ರಾಮೀಣ ಭಾರತ ಅರಳಬೇಕೆಂದರೆ, ಗ್ರಾಮೀಣ ಮಟ್ಟದಲ್ಲಿ ಗುಡಿ ಕೈಗಾರಿಕೆಗಳು ಬೆಳೆಯಬೇಕು, ಉದ್ಯಮಶೀಲತೆ ಹೆಚ್ಚು ಹೆಚ್ಚು ವೃದ್ಧಿಯಾಗಬೇಕು ಎನ್ನುವುದು ಸರ್ಕಾರದ ಆಶಯ. ಇದಕ್ಕೆ ಪೂರಕವಾಗಿ ಗ್ರಾಮೀಣ ಗುಡಿ ಕೈಗಾರಿಕೆಗಳು, ಸಣ್ಣ ಉದ್ದಿಮೆಗಳಿಗೆ ಹೆಚ್ಚಿನ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಗ್ರಾಮೀಣ ಜನರು ಉದ್ದಿಮೆದಾರರಾಗಲು ಅಗತ್ಯವಿರುವ ಬಂಡವಾಳ ಮತ್ತು ಸಂಪನ್ಮೂಲಗಳು, ಮೌಲ್ಯವರ್ಧನೆ ಹಾಗೂ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಸೀಮಿತವಾಗಿಲ್ಲ. ಜನರನ್ನು ಉದ್ಯಮಶೀಲತೆ ಸೆಳೆಯುವ ನಿಟ್ಟಿನಲ್ಲಿ ಪ್ರಾಥಮಿಕವಾಗಿ ಸಾಕಷ್ಟು ಎಡರು ತೊಡರುಗಳಿರುವುದನ್ನು ಸರ್ಕಾರ ಗುರುತಿಸಿದೆ. ಆಸಕ್ತರಿಗೆ/ಅರ್ಹರಿಗೆ ಮಾಹಿತಿ ನೀಡುವ ಹಾಗೂ ಉದ್ದಿಮೆ ಪ್ರಾರಂಭಿಸಲು ಪ್ರಾಥಮಿಕ ತೊಡಕುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲೇ ಏಕಗವಾಕ್ಷಿ ಯೋಜನೆಯಡಿಯಲ್ಲಿ ಉದ್ಯಮಶೀಲತೆಯ ಪ್ರಕ್ರಿಯೆಗಳನ್ನು ಸೇರಿಸುವ ಮೂಲಕ ಜನಸ್ನೇಹಿ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದನ್ನು ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಪಂಚಾಯತ್ ಸಂಸ್ಥೆಯದ್ದಾಗಿದೆ.

**(viii) ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯನೀತಿಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸಲು ಸಮರ್ಥಗೊಳಿಸುವುದಕ್ಕಾಗಿ ಬೇರುಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಮನೋಭಾವ ಮತ್ತು ವಾತಾವರಣವನ್ನು ನಿರ್ಮಿಸುವುದು;**

ಗ್ರಾಮೀಣ ಬದುಕನ್ನು ಸಮರ್ಥವಾಗಿ ರೂಪಿಸುವಲ್ಲಿ ಸಹಕಾರಿ ವ್ಯವಸ್ಥೆಯ ಪಾತ್ರದ ದೊಡ್ಡದು. ಸರ್ಕಾರಗಳ ಅಭಿವೃದ್ಧಿ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸಹಕಾರಿ ಚಳವಳಿ ಗ್ರಾಮೀಣ ಮಟ್ಟದಲ್ಲಿ ಕ್ರಾಂತಿ ಮಾಡಿರುವುದು ಈಗ ಇತಿಹಾಸ. ಕೃಷಿ, ಅರಣ್ಯ, ವ್ಯಾಪಾರ, ವಾಣಿಜ್ಯ, ಉಳಿತಾಯ, ಕಿರು ಸಾಲ ನೆರವು, ಸಹಕಾರಿ ಆಂದೋಲನದ ವಿವಿಧ ಆಯಾಮಗಳನ್ನು ಅನಾವರಣಗೊಳಿಸುತ್ತದೆ. ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ ಎನ್ನುವ ಸಹಕಾರಿ ತತ್ವ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಲು, 'ಸಹಕಾರ' ತನ್ನದೇ ಆದ ಕೊಡುಗೆಯನ್ನು ನೀಡಿದೆ. ಆದುದರಿಂದ ಗ್ರಾಮೀಣ ಮಟ್ಟದಲ್ಲಿ ಹೆಚ್ಚು ಹೆಚ್ಚು ಸಹಕಾರಿ ಮನೋಭಾವವನ್ನು ರೂಢಿಸುವ, ಸಂಘಟಿಸುವ ಪ್ರಯತ್ನಗಳನ್ನು ಜೀವಂತವಾಗಿಡುವ ಕೆಲಸ ಪಂಚಾಯತ್ ಸಂಸ್ಥೆಗಳದ್ದಾಗಿದೆ.

**(ix) ಗ್ರಾಮೀಣ ಪ್ರದೇಶಗಳಲ್ಲಿ ಜನರ ಕೌಶಲ್ಯ, ಜ್ಞಾನ ಮತ್ತು ಇತರ ಸಾಮರ್ಥ್ಯಗಳಿಗೆ ಅನುಗುಣವಾಗಿ ಗ್ರಾಮೀಣ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಬಲೀಕರಣಗೊಳಿಸುವುದು;**

ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ವ್ಯಕ್ತಿಯನ್ನು ಅಭಿವೃದ್ಧಿ ಪಥದೆಡೆಗೆ ಸಾಗಿಸುವ ಮಾರ್ಗಗಳು ಎನ್ನುವುದು ಸ್ಪಷ್ಟ. ಜಾಗತೀಕರಣ, ಔದ್ಯೋಗೀಕರಣ, ನಗರೀಕರಣ ಎನ್ನುವ ಮಾತುಗಳಲ್ಲಿ ಸ್ಪರ್ಧಾತ್ಮಕತೆ ಬಿರುಸಿನ ಓಟ ಎದ್ದುಕಾಣುತ್ತದೆ. ಹೊಸತನ, ಹೊಸ ವಿಷಯಗಳು, ಧೋರಣೆಯಲ್ಲಿ ಬದಲಾವಣೆ, ಚಿಂತನಾಕ್ರಮಗಳು ಓಡುತ್ತಿರುವ ಕಾಲದೊಂದಿಗೆ ಮಿಳಿತವಾಗಿವೆ. ಬದಲಾದ ಸ್ಥಿತಿ–ಗತಿಯಲ್ಲಿ, ಬದಲಾವಣೆಗಳಿಗೆ ಹೊಂದಿಕೊಳ್ಳುವ ಮತ್ತು ಸಾಕಷ್ಟು ಅಧ್ಯಯನಗಳಲ್ಲಿ ತೊಡಗುವ ಅವಶ್ಯಕತೆ ಇದೆ. ಗಣಕ ಯಂತ್ರದ ಈ ಯುಗದಲ್ಲಿ ಇಡೀ ವಿಶ್ವ ಬೆರಳಿನ ತುದಿಗೆ ಎಟುಕುವಷ್ಟು, ಕುಳಿತಲ್ಲಿಯೇ ಹಲವು ಹೊಣೆಗಾರಿಕೆಗಳನ್ನು ನಿಭಾಯಿಸುವ, ಮಾಹಿತಿಯನ್ನು

ANSSIRD & PR

ತಿಳಿದುಕೊಳ್ಳುವ ಸಂಗತಿ ಸಾಮಾನ್ಯವಾಗಿದೆ. ಹೀಗಿರುವಾಗ ಗ್ರಾಮೀಣ ಪ್ರದೇಶಗಳ ಜನರಿಗೆ ಜಗತ್ತಿನ ದೈನಂದಿನ ಆಗು–ಹೋಗುಗಳನ್ನು ತಿಳಿದುಕೊಳ್ಳುವ, ಕೃಷಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ತಾವಿರುವಲ್ಲೇ ಅಗತ್ಯ ಸಂಗತಿಗಳನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಪೂರಕ ಚಟುವಟಿಕೆ, ಮೂಲಸೌಕರ್ಯಗಳನ್ನು ಸ್ಥಳೀಯ ಸರ್ಕಾರಗಳು ಮಾಡಬೇಕಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹತ್ತರವಾದ 21 ಅಂಶಗಳ ಕಾರ್ಯಕ್ರಮಗಳಲ್ಲಿ, ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸೈಬರ್/ಕಂಪ್ಯೂಟರ್ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಹೇಳಿರುವುದು ಉಲ್ಲೇಖಾರ್ಹವಾಗಿದೆ.

**(x) ಶಾಂತಿಯುತ ಸಮಾಜ ಮತ್ತು ಕೋಮು ಸೌಹಾರ್ದವನ್ನು ಸಂರಕ್ಷಿಸುವ ಹಾಗೂ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಗಟ್ಟುವ ಸುರಕ್ಷಿತ ಮತ್ತು ಸಹನಶೀಲ ಸಮುದಾಯವನ್ನು ಪೋಷಿಸುವುದು**

ಸಮಾಜದಲ್ಲಿ ಏಕತೆ, ಶಾಂತಿ, ಸುವ್ಯವಸ್ಥೆ ಕಾಪಾಡಿಕೊಳ್ಳುವುದು ಸರ್ಕಾರಿ ವ್ಯವಸ್ಥೆಗೆ ಮಾತ್ರ ಸೀಮಿತವಾಗದೇ ಸಮುದಾಯದ ಹೊಣೆಗಾರಿಕೆ ಎಂದು ಅರಿಯಬೇಕು. ಯೋಜನೆಗಳ ಅನುಷ್ಠಾನದಲ್ಲಿ ಸಮಗ್ರತೆ ಕಾಪಾಡಿಕೊಳ್ಳಬೇಕು. ನೊಂದವರ ಪಾಲಿನ ದನಿಯಾಗಿ ಪಂಚಯತ್ ಸಂಸ್ಥೆಗಳು ನಿಲ್ಲಬೇಕಾಗುತ್ತದೆ. ಪಂಚಾಯತ್ ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯ ಸಮಿತಿಯು ತನ್ನ ವ್ಯಾಪ್ತಿಯ ಮಕ್ಕಳು, ಮಹಿಳೆಯರು, ಸಮಾಜದ ಸುರಕ್ಷಿತವಲ್ಲದ ವರ್ಗಗಳ ಪರವಾಗಿ ನಿಲ್ಲಬೇಕಾಗುತ್ತದೆ. ಸವಲತ್ತುಗಳು ಮತ್ತು ಸೇವೆಗಳನ್ನು ಒದಗಿಸುವಾಗ ಅದು ಪಟ್ಟಭದ್ರರ ಮತ್ತು ಒಂದು ಗುಂಪಿನ ಪಾಲಾಗದಂತೆ ಎಚ್ಚರವಹಿಸಬೇಕಾಗುತ್ತದೆ. ಕುಂದು–ಕೊರತೆ ನಿವಾರಣಾ ವ್ಯವಸ್ಥೆಗಳು ಶಾಂತಿಯುತ ಸಮಾಜದ ಒಂದು ಭಾಗವಾಗಿದೆ. ನಿಯಮಿತವಾಗಿ ನಡೆಯುವ ಗ್ರಾಮ ಸಭೆಗಳು, ಸಾಮಾಜಿಕ ಪರಿಶೋಧನೆಯ ಸಭೆಗಳು ಮತ್ತು ಜಮಾಬಂದಿ ಸಭೆಗಳು ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಅಂಶಗಳನ್ನು ಒಳಗೊಂಡಿರುವುದರಿಂದ ಅರ್ಹರಿಗೆ ಸೇವೆ ಮತ್ತು ಸವಲತ್ತು ತಲುಪುವುದನ್ನು ಖಾತರಿಪಡಿಸಿಕೊಳ್ಳಲು ಅನುವು ಮಾಡಿಕೊಡಬೇಕು. ಹಿಂಸೆಯ ಅಥವ ನಿಷಿದ್ಧ ಚಟುವಟಿಕೆಗಳು ಕಂಡುಬಂದರೆ ಸಂಬಂಧಿಸಿದ ಪ್ರಾಧಿಕಾರಿಗೆ ತಕ್ಷಣವೇ ವರದಿ ಮಾಡಬೇಕು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಕ್ಷಪಾತ ಗಣಿಸದೇ ಎಲ್ಲರ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳುವ ಗುರುತರ ಹೊಣೆಗಾರಿಕೆ ಪಂಚಾಯತ್ ಸಂಸ್ಥೆಗಳದ್ದಾಗಿದೆ.

**(2) ಗ್ರಾಮದ ನಿವಾಸಿಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದಾದರೂ ಒಂದು ನಿರಾಶಾದಾಯಕ ಪ್ರವೃತಿ ಅಥವಾ ಆಲೋಚನೆ ಹಬ್ಬಿದಾಗ ಅದು ನೆಲೆಗೊಳ್ಳುವುದನ್ನು ತಡೆಯುವುದು ಗ್ರಾಮ ಪಂಚಾಯಿತಿಯ ನಿರ್ದೇಶನ ತತ್ವಗಳ ಪ್ರಮುಖ ತತ್ವವಾಗಿರುತ್ತದೆ. ಹಣಕಾಸಿನ ಋಣಭಾರ, ಬಡತನ ಅಥವಾ ಇತರ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ಪೀಡಿತರಾದ ರೈತರು ಮತ್ತು ಇತರರು ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಂದರ್ಭಗಳಲ್ಲಿ ಅವರೆಡೆಗೆ ಗ್ರಾಮ ಪಂಚಾಯಿತಿಯು ವಿಶೇಷ ಗಮನಹರಿಸತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯ ಸದಸ್ಯರು ಅಂತಹ ವ್ಯರ್ಥ ಸಾಹಸಗಳ ಮನಸ್ಥಿತಿಯಿಂದ ಉಂಟಾಗುವ ಪರಿಣಾಮಗಳ ಬಗ್ಗೆ ನಿವಾಸಿಗಳನ್ನು ಜಾಗೃತಗೊಳಿಸಿ ಅವರಲ್ಲಿ ವಿಶ್ವಾಸ ಕುದುರಿಸುವ ಕ್ರಮ ಕೈಗೊಳ್ಳುವುದು.**

ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿಯ ಕಾರಣಗಳಿಂದಾಗಿ ಸಮುದಾಯದಲ್ಲಿ ಹತಾಶೆ, ಆತ್ಮಸ್ಥೈರ್ಯ ಕುಂದುವ, ಅದರಿಂದಾಗುವ ಪರಿಣಾಮಗಳು ಗಂಭೀರ ಸ್ಥಿತಿಗೆ ಎಡೆಮಾಡಿದೆ. ವ್ಯಕ್ತಿಯ ಸ್ವಾಭಿಮಾನದ ಬದುಕಿಗೆ ಚ್ಯುತಿ ಬಂತೆಂದು ತಪ್ಪು ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕರಣಗಳು ಹೆಚ್ಚು ಹೆಚ್ಚು ವರದಿಯಾಗುತ್ತಿವೆ. ಅನಿರೀಕ್ಷಿತವಾಗಿ ಬರುವ ಸಮಸ್ಯೆ ಇರಬಹುದು ಅಥವಾ ಸ್ವಯಂಕೃತ ತಪ್ಪುಗಳಿಂದಾಗಿ ಮನೋವೈಕಲ್ಯಕ್ಕೆ, ಸಂಘರ್ಷಕ್ಕೀಡಾಗುತ್ತಿರುವವರಿಗೆ 'ಸಮಾಲೊಚನೆ' ಮತ್ತು 'ಕನಿಷ್ಠ ನೆರವು' ನೀಡುವ ನಿಟ್ಟಿನಲ್ಲಿ ಪಂಚಾಯತ್‌ಗಳು ಆಲೋಚಿಸಬೇಕಿದೆ. ಪೋಲೀಸ್ ಮತ್ತು ಇತರೆ ಕಛೇರಿಗೆ ಮಾಹಿತಿ ತಲುಪುವ ಮುನ್ನ ಸ್ಥಳೀಯವಾಗಿಯೇ ವಾಸವಿರುವ ಗ್ರಾಮದ ಜನಪ್ರತಿನಿಧಿಗಳ ಗಮನಕ್ಕೆ ಇಂತಹ ಸಂಗತಿಗಳು ಬಾರದೇ ಇರುವುದಿಲ್ಲ. ಸಮಸ್ಯೆಗಳನ್ನು

ANSSIRD & PR

ಅವಲೋಕಿಸಿ ಸ್ಥಳೀಯವಾಗಿಯೇ ಪರಿಹಾರ ಕ್ರಮಗಳಿಗೆ ಯತ್ನಿಸಬೇಕು. ವಿಕೋಪಗಳಿಂದಾಗುವ ಅನಾಹುತಗಳ ಕುರಿತು ಅರಿವು ಮೂಡಿಸಿ ಆತ್ಮಸ್ಥೈರ್ಯ ಹೆಚ್ಚಿಸುವ ಪ್ರಯತ್ನಗಳಾಗಬೇಕು.

ಪಂಚಾಯತ್ ನೀತಿ ನಿರ್ದೇಶಕ ತತ್ವಗಳಿಗನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆ ಕಾರ್ಯೋನ್ಮುಖವಾಗಿ, ತನ್ಮೂಲಕ ಗ್ರಾಮೀಣ ಬದುಕಿನಲ್ಲಿ ನೆಮ್ಮದಿ ಮತ್ತು ಸಮೃದ್ಧಿಯ ಸುಂದರ ಬದುಕಿಗೆ ಅಡಿಪಾಯ ಹಾಕಬೇಕಾಗಿದೆ. ಕಾಯ್ದೆಯ ಆಶಯಗಳನ್ನು ಸಾಫಲ್ಯಗೊಳಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಇಡೀ ಸಮುದಾಯ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು ಆದ್ಯತೆಯಾಗಬೇಕಿದೆ, ಅಭಿವೃದ್ಧಿ ಚಟುವಟಿಕೆಗಳ ನಿರಂತರತೆಯನ್ನು ಕಾಪಾಡಿಕೊಳ್ಳಬೇಕಿದೆ.

* * * * *

ANSSIRD & PR